ಸಂಪುಟ 01 | ಸಂಚಿಕೆ 129 | ಬುಧವಾರ 15 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಯುವ ಕೌಶಲ್ಯ ದಿನ (World Youth Skills Day)
ವಿಶ್ವಸಂಸ್ಥೆಯು ಯುವಜನರಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯೋಗಾರ್ಹತೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವ ಉದ್ದೇಶದಿಂದ ಪ್ರತಿವರ್ಷ ಜುಲೈ 15ರಂದು ಈ ದಿನವನ್ನು ಆಚರಿಸುತ್ತದೆ.

2)ರಾಷ್ಟ್ರೀಯ ಸಾಕುಪ್ರಾಣಿಗಳ ಅಗ್ನಿ ಸುರಕ್ಷತಾ ದಿನ (National Pet Fire Safety Day)
ಮನೆಗಳಲ್ಲಿ ಬೆಂಕಿ ಅವಘಡಗಳಿಂದ ಸಾಕುಪ್ರಾಣಿಗಳನ್ನು ರಕ್ಷಿಸುವ ಬಗ್ಗೆ ಜಾಗೃತಿ ಮೂಡಿಸುವ ದಿನ.

## ಸುಭಾಷಿತ

ನೀವು ಸಂಖ್ಯೆಯೊಂದರ ಮುಂದೆ ಇರುವ ಶೂನ್ಯದಂತೆ ಮೌನವಾಗಿದ್ದರೆ ನಿಮಗೆ ಬೆಲೆ ಬರುತ್ತದೆ. ಒಂದು ಸಂಖ್ಯೆಯ ಮುಂದೆ ಎಷ್ಟು ಶೂನ್ಯಗಳು ಇರುತ್ತವೋ ಆ ಸಂಖ್ಯೆಯ ಬೆಲೆ ಅಷ್ಟೇ ಹೆಚ್ಚಾಗುತ್ತದೆ.

–ಸಿದ್ದೇಶ್ವರ ಸ್ವಾಮೀಜಿ

# ಭಾರತದ ಮೊದಲ ಸರ್ಕಾರಿ ಪ್ರಾಯೋಜಿತ ಕೃತಕ ಬುದ್ಧಿಮತ್ತೆ (AI) ವಿಶ್ವವಿದ್ಯಾಲಯ ಘೋಷಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕರ್ನಾಟಕದಲ್ಲಿ ಭಾರತದ ಮೊದಲ ಸರ್ಕಾರಿ ಪ್ರಾಯೋಜಿತ ಕೃತಕ ಬುದ್ಧಿಮತ್ತೆ (AI) ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಕಟಿಸಿದ್ದಾರೆ. ಇಂದು ಬೆಂಗಳೂರಿನ ಬಿಐಇಸಿ (SÉEC) ನಲ್ಲಿ ನಡೆದ 'ಗೂಗಲ್ ಐ/ಓ ಕನೆಕ್ಟ್ ಇಂಡಿಯಾ 2026' (Google I/O Connect India 2026) ಘೋಷಣೆ ಮಾಡಿದರು. ಇದರೊಂದಿಗೆ, ಸ್ಟಾರ್ಟ್ ಅಪ್‌ಗಳು ಮತ್ತು ಉದ್ಯಮಗಳ ಸಂಶೋಧನೆ ಹಾಗೂ ಅಭಿವೃದ್ಧಿಗಾಗಿ ವಿಶೇಷ '0ಚಿ ಹಬ್' (AI Hub) ಅನ್ನು ಇನ್‌ಕ್ಯುಬೇಶನ್ ಕೇಂದ್ರವಾಗಿ ಸ್ಥಾಪಿಸಲಾಗುವುದು ಎಂದು ಅವರು ತಿಳಿಸಿದರು. ಪ್ರಮುಖ ಘೋಷಣೆಗಳು ಮತ್ತು ಸರ್ಕಾರದ ಉಪಕ್ರಮಗಳು**

ಭಾರತದ ಮೊದಲ ಸರ್ಕಾರಿ ೦ಟ ವಿಶ್ವವಿದ್ಯಾಲಯ ಜಾಗತಿಕ ಮಟ್ಟದ 05 ಪ್ರತಿಭೆಗಳನ್ನು ರೂಪಿಸಲು, ಸುಧಾರಿತ ಸಂಶೋಧನೆಗಳನ್ನು ಉತ್ತೇಜಿಸಲು ಮತ್ತು ಶಿಕ್ಷಣ ಸಂಸ್ಥೆಗಳು, ಉದ್ಯಮ ಹಾಗೂ ಸರ್ಕಾರದ ನಡುವೆ ಬಲವಾದ ಸಮನ್ವಯ ಸಾಧಿಸಲು ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುವುದು. AI ಹಬ್ (AI Hub) ನವೋದ್ಯಮಗಳು (Startups), ತಂತ್ರಜ್ಞಾನ ಕಂಪನಿಗಳು ಮತ್ತು ಸಂಶೋಧಕರಿಗೆ ಕೃತಕ ಬುದ್ಧಿಮತ್ತೆ




ತಂತ್ರಜ್ಞಾನದಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿ ಕೈಗೊಳ್ಳಲು ಇದು ಅತ್ಯಾಧುನಿಕ ಇನ್‌ಕ್ಯುಬೇಶನ್ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ಸರ್ಕಾರದ ದೂರದೃಷ್ಟಿ ಮತ್ತು '05–ಓಚಿಣುತಜ' ರಾಜ್ಯದ ಗುರಿ ತಂತ್ರಜ್ಞಾನವನ್ನು ಕೇವಲ ಘೋಷಣೆಯಾಗಿ ಉಳಿಸದೆ, ಆಡಳಿತ ಮತ್ತು ಸಾರ್ವಜನಿಕ ಸೇವೆಗಳಲ್ಲಿ ಸಂಪೂರ್ಣವಾಗಿ ಅಳವಡಿಸಿಕೊಂಡು ಕರ್ನಾಟಕವನ್ನು '05– (ಕೃತಕ ಬುದ್ಧಿಮತ್ತೆ ಆಧಾರಿತ) ರಾಜ್ಯವನ್ನಾಗಿ ಮಾಡುವುದು ಸರ್ಕಾರದ ಪ್ರಮುಖ ಗುರಿಯಾಗಿದೆ. ಶಿಕ್ಷಣ ಶಿಕ್ಷಕರಿಗೆ ಹೆಚ್ಚು ಪರಿಣಾಮಕಾರಿಯಾಗಿ ಬೋಧಿಸಲು 0ನ ಆಧಾರಿತ ಸಹಾಯಕ ಪರಿಕರಗಳ ಬಳಕೆ. ಆರೋಗ್ಯ ರಕ್ಷಣೆ:* ಕಾಯಿಲೆಗಳ ಆರಂಭಿಕ ಪತ್ತೆ ಮತ್ತು ಸುಧಾರಿತ ವೈದ್ಯಕೀಯ ಚಿಕಿತ್ಸಾ ಬೆಂಬಲ. ಕೃಷಿ: ರೈತರಿಗೆ ನೈಜ ಸಮಯದ (Real-time) ನಿಖರ ಕೃಷಿ ಸಲಹೆಗಳನ್ನು ನೀಡುವುದು.

ಸಾರ್ವಜನಿಕ ಸೇವೆಗಳು : ನಾಗರಿಕರಿಗೆ ಸರ್ಕಾರದ ಸೇವೆಗಳನ್ನು ಅತ್ಯಂತ ವೇಗವಾಗಿ ಮತ್ತು ಗೌರವಯುತವಾಗಿ ತಲುಪಿಸುವುದು. ಸಣ್ಣ



ಉದ್ಯಮಗಳು : ಸ್ಥಳೀಯ ಸಣ್ಣ ಉದ್ಯಮಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ೦ಖ ತಂತ್ರಜ್ಞಾನದ ನೆರವು ನೀಡುವುದು. ಗೂಗಲ್ ಸಂಸ್ಥೆಯೊಂದಿಗೆ ಪಾಲುದಾರಿಕೆಗೆ ಕರೆ ಕಳೆದ ಎರಡು ದಶಕಗಳಿಂದ ಬೆಂಗಳೂರಿನಲ್ಲಿ ಗೂಗಲ್ ಸಂಸ್ಥೆಯ ಕೊಡುಗೆಯನ್ನು ಶ್ಲಾಘಿಸಿದ ಡಿ.ಕೆ. ಶಿವಕುಮಾರ್ ಅವರು, ಮುಖ್ಯವಾಗಿ 5 ಪ್ರಮುಖ ಕ್ಷೇತ್ರಗಳಲ್ಲಿ ಒಟ್ಟಾಗಿ ಕೆಲಸ ಮಾಡಲು ಗೂಗಲ್ ಸಂಸ್ಥೆಗೆ ಆಹ್ವಾನ ನೀಡಿದರು.

ಸ್ಥಳೀಯ ಪರಿಹಾರಗಳು: ಶಿಕ್ಷಣ, ಆರೋಗ್ಯ, ಕೃಷಿ ಮತ್ತು ಸಣ್ಣ ಉದ್ಯಮಗಳಿಗೆ ಸೂಕ್ತವಾದ ಪರಿಕರಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವುದು. ಸ್ಟಾರ್ಟ್ ಅಪ್ ಗಳಿಗೆ ಬೆಂಬಲ: ಭಾರತದ ಸ್ಥಳೀಯ ಸವಾಲುಗಳಿಗೆ ತಂತ್ರಜ್ಞಾನದ ಮೂಲಕ ಪರಿಹಾರ ಕಂಡುಕೊಳ್ಳುವ ಸ್ಟಾರ್ಟ್ ಅಪ್‌ಗಳಿಗೆ ಉತ್ತೇಜನ ನೀಡುವುದು. ವಿದ್ಯಾರ್ಥಿಗಳಿಗೆ ಕಲಿಕಾ ಅವಕಾಶ : ಕರ್ನಾಟಕದಾದ್ಯಂತ ವಿದ್ಯಾರ್ಥಿಗಳಿಗೆ 05 ತರಬೇತಿ ಮತ್ತು ಕಲಿಕಾ ಅವಕಾಶಗಳನ್ನು ವಿಸ್ತರಿಸುವುದು. ಜವಾಬ್ದಾರಿಯುತ 05 ಪ್ರಯೋಗಾಲಯ:* ಕರ್ನಾಟಕವನ್ನು ಜಾಗತಿಕ ಮಟ್ಟದ ಸುರಕ್ಷಿತ, ನಂಬಿಕಸ್ಥ ಮತ್ತು ಜವಾಬ್ದಾರಿಯುತ ತಂತ್ರಜ್ಞಾನದ ಪ್ರಯೋಗಾಲಯವನ್ನಾಗಿ ರೂಪಿಸುವುದು. ದೀರ್ಘಕಾಲೀನ ಹೂಡಿಕೆ: ಕರ್ನಾಟಕದ ತಂತ್ರಜ್ಞಾನ ಪರಿಸರ ವ್ಯವಸ್ಥೆ ಹಾಗೂ ಮೂಲಸೌಕರ್ಯದಲ್ಲಿ ಗೂಗಲ್ ದೀರ್ಘಕಾಲೀನ ಪಾಲುದಾರಿಕೆಯನ್ನು ಬಲಪಡಿಸುವುದು.

ತಂತ್ರಜ್ಞಾನ ಮತ್ತು ಹೂಡಿಕೆ ದೃಷ್ಟಿಕೋನ ಭಾರತದ ಒಟ್ಟು ಸಾಫ್ಟ್‌ವೇರ್ ರಫ್ತಿನಲ್ಲಿ ಕರ್ನಾಟಕವು ಸುಮಾರು ಶೇ. 40 ರಷ್ಟು ಕೊಡುಗೆ ನೀಡುತ್ತಿದ್ದು, ಬೆಂಗಳೂರು 17,000 ಕ್ಕೂ ಹೆಚ್ಚು ಸ್ಟಾರ್ಟ್ ಅಪ್‌ಗಳಿಗೆ ಹಾಗೂ ಸಾವಿರಾರು ಜಾಗತಿಕ ಸಾಮರ್ಥ್ಯ ಕೇಂದ್ರಗಳಿಗೆ (ಉಅಅ) ನೆಲೆಯಾಗಿದೆ. ಸುಧಾರಿತ ಕಂಪ್ಯೂಟಿಂಗ್, ಡೇಟಾ ಸೆಂಟರ್‌ಗಳು ಮತ್ತು ಸಂಶೋಧನೆಗೆ ಅಗತ್ಯವಿರುವ ಡಿಜಿಟಲ್ ಮೂಲಸೌಕರ್ಯಗಳನ್ನು ಸರ್ಕಾರ ಇನ್ನಷ್ಟು ಬಲಪಡಿಸಲಿದೆ ಃಥ'ಡೆವಲಪರ್‌ಗಳು ಧೈರ್ಯವಾಗಿ ಹೊಸದನ್ನು ನಿರ್ಮಿಸಲಿ, ಉದ್ಯಮಿಗಳು ದೊಡ್ಡ ಕನಸು ಕಾಣಲಿ, ಸಂಶೋಧಕರು ಆವಿಷ್ಕಾರವನ್ನು ಮುಂದುವರಿಸಲಿ ಮತ್ತು ವಿದ್ಯಾರ್ಥಿಗಳು ನಿರಂತರವಾಗಿ ಕಲಿಯುತ್ತಿರಲಿ. ಕೃತಕ ಬುದ್ಧಿಮತ್ತೆಯು ನಾವೀನ್ಯತೆ, ಒಳಗೊಳ್ಳುವಿಕೆ ಮತ್ತು ವಿಶ್ವಾಸಾರ್ಹತೆಯಿಂದ ಕೂಡಿರುವುದನ್ನು ಕರ್ನಾಟಕ ಸರ್ಕಾರ ಖಚಿತಪಡಿಸಲಿದೆ."

## ಸಂಕಲ್ಪ ಸಮಾಗಮ ಯಾತ್ರೆಗೆ ಅದ್ದೂರಿ ಚಾಲನೆ

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣದಲ್ಲಿ ಇಂದು ಮಾಜಿ ಸಚಿವ ಶಿವನಗೌಡ ನಾಯಕ್ ಅವರ 49ನೇ ಹುಟ್ಟು ಹಬ್ಬದ ಪ್ರಯುಕ್ತ ಕೆ.ಶಿವನಗೌಡ ನಾಯಕ್ ಅಭಿಮಾನಿ ಬಳಗದ ವತಿಯಿಂದ ಹಮ್ಮಿಕೊಂಡಿರುವ ಸಂಕಲ್ಪ ಸಮಾಗಮ ಯಾತ್ರೆಗೆ ಪಟ್ಟಣದ ಅಭಿನವ ಸಿದ್ದಲಿಂಗ ಮಹಾಸ್ವಾಮಿಗಳು ಡಾ. ಭಾಬಾ ಸಾಹೇಬ್ ಅಂಬೇಡ್ಕರ್ ವೃತ್ತದಲ್ಲಿ ನಾಮಫಲಕಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಚಾಲನೆ ನೀಡಿದರು.**




ಪಟ್ಟಣದ ಐತಿಹಾಸಿಕ ದೇವಾಲಯವಾದ ಶ್ರೀ ತ್ರಿಯಂಭಕೇಶ್ವರ ದೇವಸ್ಥಾನದಿಂದ ಕನಕನಗರದ ಸಮಾರಂಭ ವೇದಿಕೆಯ ವರೆಗೆ ಸಾನಿದ್ಯ ವಹಿಸಲಿರುವ ಗೌರಿಗದ್ದೆಯ ಅವಧೂತ ವಿನಯ್ ಗುರುಜಿ ಹಾಗೂ ಕಲ್ಮಠದ ಸಿದ್ದಲಿಂಗ ಮಹಾಸ್ವಾಮಿಗಳನ್ನು ಸಾವಿರಾರು ಮಹಿಳೆಯರು ಕಳಸ, ಕುಂಭ, ಭಾಜಾ ಬಜಂತ್ರಿ, ಡೊಳ್ಳು ಕುಣಿತದ ಮೂಲಕ ಅದ್ದೂರಿಯಾಗಿ ಸ್ವಾಗತಿಸಲಾಯಿತು.

## ಸಾವಲೇಶ್ವರ ಗ್ರಾಮಸ್ಥರು ಮಳೆಗಾಗಿ ಕತ್ತೆಗಳ ಮದುವೆ ಮಾಡುವ ಮುಖಾಂತರ ವಿಶೇಷ ಪೂಜೆ ಸಲ್ಲಿಸಿದರು

ನೈಜ್ಯ ದೆಸೆ ನ್ಯೂಸ್

**ಆಳಂದ: ತಾಲ್ಲೂಕಿನಾದ್ಯಂತ ಬಿಸಿಲಿನ ಅಬ್ಬರ ಜೋರಾಗಿದೆ. ಮಳೆ ಬರುತ್ತೆ ಎಂದು ಆಕಾಶದತ್ತ ಮುಖ ಮಾಡಿ ಮಳೆಗಾಗಿ ಕಾದು ಕುಳಿತ ರೈತರು ಮಳೆ ಬಾರದೇ ಕೃಷಿ ಚಟುವಟಿಕೆ ಕುಂಠಿತವಾಗಿರುವ ಕಾರಣ ಸಾವಲೇಶ್ವರ ಗ್ರಾಮಸ್ಥರು ಕತ್ತೆಗಳ ಮದುವೆ ಮಾಡುವ ಮುಖಾಂತರ ಮಳೆರಾಯನಿಗೆ ವಿಶೇಷ ಪೂಜೆ ಮಾಡಿದರು**



ರೈತರು ಕತ್ತೆಗೆ ಹೊಸ ಸೀರೆ, ಕುಪ್ಪಸ ತೊಡಿಸಿ ಮಾಂಗಲ್ಯ ಕಟ್ಟಿಸಿ ಅರಿಸಿಣ?ಕುಂಕುಮ ಹಚ್ಚಿ ಸಿಂಗಾರ ಮಾಡಿದ್ದರು. ಸಕಾಲಕ್ಕೆ ಮಳೆಯಾಗದೇ ಬೆಳೆಗಳು ಒಣಗುತ್ತಿದ್ದು, ಅಂತರ್ಜಲ ಕುಸಿಯುತ್ತಿದೆ. ಶೀಘ್ರವೇ ಉತ್ತಮ ಮಳೆ ಸುರಿಸಲಿ, ಎಂದು ಪ್ರಾರ್ಥಿಸಿದರು.

# ಕಂಪ್ಲಿಯಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮ ಜಾಗೃತಿ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ವಿದ್ಯಾರ್ಥಿ ಜೀವನ ಭವಿಷ್ಯ ರೂಪಿಸಿಕೊಳ್ಳುವ ಮಹತ್ವದ ಘಟ್ಟವಾಗಿದೆ. ಈ ಹಂತದಲ್ಲಿ ಮಾದಕ ವಸ್ತು ಸೇರಿದಂತೆ ಆರೋಗ್ಯಕ್ಕೆ ಮಾರಕವಾಗುವಂತಹ ಯಾವುದೇ ಚಟಗಳ ಆಕರ್ಷಣೆಗೆ ಒಳಗಾಗದೆ ದೂರವಿರಬೇಕು ಎಂದು ಎಎಸ್‌ಐ ಬಸವರಾಜ ತಿಳಿಸಿದರು.**

ಶ್ರೀ ಸ್ವಾಮಿ ವಿವೇಕಾನಂದ ಶಾಲೆ ಕೋಟೆ ಕಂಪ್ಲಿ ಹಾಗೂ ಕಂಪ್ಲಿ ಪೊಲೀಸ್ ಠಾಣೆ ವತಿಯಿಂದ ಮಂಗಳವಾರ ಆಯೋಜಿಸಿದ್ದ ಮಾದಕ ವಸ್ತು ವಿರೋಧಿ ಸಪ್ತಾಹ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಾದಕ ವಸ್ತು ಸೇವನೆಯಿಂದ



ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ಪರಿಣಾಮ ಉಂಟಾಗಿ ವ್ಯಸನಿಗಳು ಸಾವಿಗೆ ಸಮೀಪ ಆಗುತ್ತಾರೆ. ಹೀಗಾಗಿ ಇಂದಿನ ಯುವಸಮೂಹ ಉತ್ತಮ ಅಭ್ಯಾಸಗಳ ಕಡೆಗೆ ಗಮನ ಕೊಡಬೇಕು. ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳಲು ಪ್ರಯತ್ನಿಸಬೇಕು ಎಂದರು.

ವಿದ್ಯಾರ್ಥಿಗಳು ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು. ಎಲ್ಲಾದರೂ ಮಾದಕ ವಸ್ತುಗಳ ಮಾರಾಟ ಮತ್ತು ಅಕ್ರಮ ಸಾಗಾಟದಂತಹ ಪ್ರಕರಣ ಕಂಡು ಬಂದರೆ ತಕ್ಷಣ ಪೊಲೀಸ್ ಇಲಾಖೆಯ ಗಮನಕ್ಕೆ ತರಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ಮಾದಕ ವಸ್ತುಗಳನ್ನು ಬಳಸುವುದಿಲ್ಲ ಎಂದು ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಮುಖ್ಯಗುರು ಜಿಲಾನಸಾಬ್ ಬಡಿಗೇರ್ , ಪೊಲೀಸ್ ಸಿಬ್ಬಂದಿ, ಶಿಕ್ಷಕರಾದ ಕಂಬತ್ ಶ್ವೇತಾ, ಕೊಲ್ಕರ್ ಜಯಶ್ರೀ, ವರ್ಷಾ ಮಂಜುಮದಾರ್, ಗೌಸಿಯಾ, ಜೆ. ಅಕ್ಷತಾ, ಡಿ. ಉಮಾದೇವಿ, ಮಠದ ಸುನೀತಾ, ಕೊಲ್ಕರ್ ಉಮಾ ಹಾಗೂ ವಿದ್ಯಾರ್ಥಿಗಳು ಇದ್ದರು.

# ಶಿಕ್ಷಕ ಶಿವಪ್ಪ ಲಮಾಣಿ ಅವರಿಗೆ ಅದ್ದೂರಿ ನಿವೃತ್ತಿ ಅಭಿನಂದನಾ ಸಮಾರಂಭ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಜಾಲಹಳ್ಳಿ ಸಮೀಪದ ಹೊಸೂರು ಸಿದ್ದಾಪುರ ಗ್ರಾಮದ ಹಳೆಯ ವಿದ್ಯಾರ್ಥಿಗಳ ವತಿಯಿಂದ, ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಮರಗಂಟನಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 32 ವರ್ಷಗಳಿಗೂ ಅಧಿಕ ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಶಿವಪ್ಪ ಲಮಾಣಿ ಅವರ ನಿವೃತ್ತಿ ಅಭಿನಂದನಾ ಸಮಾರಂಭವನ್ನು ಅದ್ದೂರಿಯಾಗಿ ಆಯೋಜಿಸಲಾಯಿತು.**

ಕಾರ್ಯಕ್ರಮದಲ್ಲಿ ಗ್ರಾಮಸ್ಥರು, ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದ, ಹಳೆಯ ವಿದ್ಯಾರ್ಥಿಗಳು, ಎಸ್‌ಡಿಎಂಸಿ ಸದಸ್ಯರು, ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಹಾಗೂ ಗಣ್ಯರು ಭಾಗವಹಿಸಿ, ಶಿವಪ್ಪ ಲಮಾಣಿ ಅವರ ಶಿಕ್ಷಣ ಕ್ಷೇತ್ರದ



ಅಮೂಲ್ಯ ಸೇವೆಯನ್ನು ಸ್ಮರಿಸಿದರು. ಇದೇ ವೇಳೆ ಅವರಿಗೆ ಶಾಲು ಹೊದಿಸಿ, ಪುಷ್ಪಹಾರ ಹಾಕಿ, ಸ್ಮರಣಿಕೆ ನೀಡಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮಾತನಾಡಿದ ಗಣ್ಯರು, "ಶಿವಪ್ಪ ಲಮಾಣಿ ಅವರು ತಮ್ಮ ಸೇವಾವಧಿಯಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ, ಶಿಸ್ತು ಮತ್ತು ಮೌಲ್ಯಗಳನ್ನು ಬೆಳೆಸಿದ್ದಾರೆ. ಅವರ ಸೇವೆ ಶಿಕ್ಷಣ ಕ್ಷೇತ್ರಕ್ಕೆ ಮಾದರಿಯಾಗಿದ್ದು, ಸದಾ ಸ್ಮರಣೀಯವಾಗಿರುತ್ತದೆ" ಎಂದು ಪ್ರಶಂಸಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಿವಪ್ಪ ಲಮಾಣಿ ಅವರು, ತಮ್ಮ ಸೇವಾ ಅವಧಿಯಲ್ಲಿ ಸಹಕರಿಸಿದ ಶಿಕ್ಷಣ ಇಲಾಖೆ ಅಧಿಕಾರಿಗಳು, ಸಹ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಗ್ರಾಮಸ್ಥರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು. ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಸಮಾಜಕ್ಕೆ ಆದರ್ಶ ನಾಗರಿಕರಾಗಿ ಬೆಳೆಯಲಿ ಎಂದು ಶುಭ ಹಾರೈಸಿದರು.ಈ ಸಂದರ್ಭದಲ್ಲಿ ಹೊಸೂರು ಸಿದ್ದಾಪುರ ಗ್ರಾಮದ ಹಿರಿಯ ಮುಖಂಡರು, ಹಳೆಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು

> **"ಶಿವಪ್ಪ ಲಮಾಣಿ ಸರ್ ಅವರು 32 ವರ್ಷಗಳ ಕಾಲ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸಿದ ಆದರ್ಶ ಶಿಕ್ಷಕರು. ಅವರ ಶಿಸ್ತು, ಸರಳತೆ, ಪ್ರಾಮಾಣಿಕತೆ ಮತ್ತು ಶಿಕ್ಷಣದ ಮೇಲಿನ ನಿಷ್ಠೆ ಎಲ್ಲರಿಗೂ ಮಾದರಿ. ನಿವೃತ್ತಿಯಾದರೂ ಅವರ ಸೇವೆ ಮತ್ತು ಮಾರ್ಗದರ್ಶನ ಸದಾ ನಮ್ಮೊಂದಿಗೆ ಇರುತ್ತದೆ. ಅವರ ಮುಂದಿನ ಜೀವನ ಸುಖ, ಶಾಂತಿ ಮತ್ತು ಉತ್ತಮ ಆರೋಗ್ಯದಿಂದ ಕೂಡಿರಲಿ ಎಂದು ಹಾರೈಸುತ್ತೇವೆ."**
> ತಾತಪ್ಪ ನಾಯಕ, ಹಳೆಯ ವಿದ್ಯಾರ್ಥಿ

# ಜು.19ರಂದು ಸ್ಪರ್ಧಾತ್ಮಕ ಪರೀಕ್ಷೆಗಳ ಉಚಿತ ತರಬೇತಿ ಕಾರ್ಯಾಗಾರ : ಎಂ.ಬಿ. ಸಿದ್ದರಾಮಯ್ಯ ಸ್ವಾಮಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಮಾಧ್ಯಮ ಸಮಿತಿಯ ಗೌರವಾಧ್ಯಕ್ಷ ಎಂ.ಬಿ. ಸಿದ್ದರಾಮಯ್ಯ ಸ್ವಾಮಿ ಮಾತನಾಡಿ, ಜು.19ರಂದು ಬೆಳಿಗ್ಗೆ 10 ಗಂಟೆಯಿಂದ ಪಟ್ಟಣದ ಕಲ್ಮಠ ಗುರುಭವನದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಒಂದು ದಿನದ ಉಚಿತ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.**

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಮಾಧ್ಯಮ ಸಮಿತಿ, ಮಾನ್ವಿ?ಸಿರವಾರ?ಕವಿತಾಳ ಘಟಕ, ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘ ತಾಲೂಕು ಘಟಕ, ಭೀಮರಾಯ ಸ್ಟಡಿ ಸರ್ಕಲ್ ಹಾಗೂ ದಿಕ್ಸೂಚಿ



ಸ್ಪರ್ಧಾತ್ಮಕ ಮಾಸಪತ್ರಿಕೆ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಸುವರ್ಣಗಿರಿ ವಿರಕ್ತಮಠದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು ವಹಿಸಲಿದ್ದಾರೆ. ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಎನ್.ಎಸ್. ಬೋಸರಾಜು ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಜಿ. ಹಂಪಯ್ಯ ನಾಯಕ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಪೂವಿತಾ ಎಸ್. ಐಎಎಸ್, ರಾಯಚೂರು ಮಹಾನಗರ ಪಾಲಿಕೆ ಮುಖ್ಯ ಆಯುಕ್ತ ಜುಬಿನ್ ಮಹಾಪಾತ್ರ ಐಎಎಸ್, ಬೆಂಗಳೂರು ಬಂಧಿಖಾನೆ ಡಿಐಜಿ ಜಿನೇಂದ್ರ ಖಣಗಾವಿ ಐಪಿಎಸ್, ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಜಿ. ಹರೀಶ್, ಮಾನ್ವಿ ತಹಶೀಲ್ದಾರ್ ಭೀಮರಾಯ ಬಿ. ಸೇರಿದಂತೆ ವಿವಿಧ ಗಣ್ಯರು ಭಾಗವಹಿಸಲಿದ್ದಾರೆ. ದಿಕ್ಸೂಚಿ ಸ್ಪರ್ಧಾತ್ಮಕ ಮಾಸಪತ್ರಿಕೆಯ ಸಂಪಾದಕ ಎ.ಟಿ. ಪಾಟೀಲ್, ಅಥ–'ಶಾಸ್ತ್ರಜ್ಞ ಹಾಗೂ ಲೇಖಕ ನೇ.ತಿ. ಸೋಮಶೇಖರ್, ರಾಜರತ್ನ ಅಕಾಡೆಮಿಯ ಜಗದೀಶ್ ಸೇರಿದಂತೆ ಪರಿಣಿತರು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಅಗತ್ಯ ಮಾರ್ಗದರ್ಶನ ನೀಡಲಿದ್ದಾರೆ ಎಂದು ತಿಳಿಸಿದರು.

ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘದ ತಾಲೂಕು ಅಧ್ಯಕ್ಷ ಆಂಜನೇಯ ನಸ್ಲಾಪೂರ್ ಮಾತನಾಡಿ, ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 371(ಜೆ) ವಿಶೇಷ ಮೀಸಲಾತಿ ದೊರೆತಿದ್ದರೂ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ ಕುರಿತು ಸಮರ್ಪಕ ಮಾರ್ಗದರ್ಶನದ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ಪಿಯುಸಿ ಹಾಗೂ ಪದವಿ ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಗಳ ಅಭ್ಯರ್ಥಿಗಳು ಮತ್ತು ಉಪನ್ಯಾಸಕರಿಗೆ ಅನುಕೂಲವಾಗುವ ಉದ್ದೇಶದಿಂದ ಈ ಕಾರ್ಯಾಗಾರ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 8431546405, 9902134999 ಹಾಗೂ 9845085161 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾಧ್ಯಮ ಸಮಿತಿಯ ತಾಲೂಕು ಅಧ್ಯಕ್ಷ ರಾಜಶೇಖರಸ್ವಾಮಿ ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ಮೌನ

ಮಾತಿಗಿಂತ ಮೌನವೇ ಕೆಲವೊಮ್ಮೆ ಶ್ರೇಷ್ಠ,
ಮನದಾಳದ ಭಾವಗಳಿಗೆ ಅದೇ ನಿಜದ ಪಥ.
ಮೌನದಲ್ಲಿ ಮೂಡುವುದು ಸಾವಿರ ಕನಸು,
ಮಾತಿನಲ್ಲಿ ಸಿಗದಿರಬಹುದು ಅದರ ಅನುಭವ.

ಮೌನವು ಮನಸ್ಸಿಗೆ ನೆಮ್ಮದಿಯ ನೆರಳು,
ಚಿಂತನೆಗೆ ಬೆಳಕಾಗುವ ಶಾಂತಿಯ ತೊರೆ.
ಕೋಪದ ಜ್ವಾಲೆಯನ್ನೂ ತಣಿಸುವ ಶಕ್ತಿ,
ಸಹನೆಯ ಪಾಠ ಕಲಿಸುವ ಅಮೂಲ್ಯ ಭಕ್ತಿ.

ಮೌನದ ಭಾಷೆ ಎಲ್ಲರಿಗೂ ಅರ್ಥವಾಗದು,
ಅದನ್ನು ಅರಿತವರಿಗೆ ಜೀವನ ಸುಂದರವಾಗುವುದು.
ಮೌನವು ಸೋಲಿನ ಸಂಕೇತವಲ್ಲ,
ಅದು ಆತ್ಮವಿಶ್ವಾಸದ ಮೌನ ಘೋಷಣೆ.

ನಗುವಿನ ಹಿಂದೆ ಮೌನವಿರಬಹುದು,
ಕಣ್ಣೀರ ಹಿಂದೆ ನೋವಿರಬಹುದು.
ಮೌನದೊಳಗೆ ಅಡಗಿರುವ ಸತ್ಯವನ್ನು ಅರಿತರೆ,
ಜೀವನದ ಅರ್ಥವೇ ಹೊಸದಾಗಿ ಕಾಣುವುದು.

ಮಾತು ಮುತ್ತಾದರೆ ಮೌನವು ಚಿನ್ನ,
ಅದರ ಮೌಲ್ಯ ತಿಳಿದವರೇ ನಿಜವಾದ ಧನ್ಯರು.
ಮೌನದ ಶಕ್ತಿಯನ್ನು ಬದುಕಿನಲ್ಲಿ ಅಳವಡಿಸೋಣ,
ಶಾಂತಿ, ಸಹನೆ, ಸೌಹಾರ್ದದಿಂದ ಜೀವನ ಕಟ್ಟೋಣ.

–ಎ ಎನ್. ರಮೇಶ್ ಗುಬ್ಬಿ

# ಬಿಡದಿ ಟೌನ್‌ಶಿಪ್ ಯೋಜನೆ ಕೈಬಿಡುವಂತೆ ದೇವೇಗೌಡರ ಆಗ್ರಹ

❏ ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ಬಿಡದಿ ಸಮಗ್ರ ಉಪನಗರ ಯೋಜನೆಯನ್ನು ಕೈಬಿಡಬೇಕು ಹಾಗೂ ರೈತರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ರಾಜ್ಯಸರ್ಕಾರವನ್ನು ಒತ್ತಾಯಿಸಿದರು.ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಹಾಗೂ ತಾವು ಮುಖ್ಯಮಂತ್ರಿಯಾಗಲು ಹೈ ಕಮಾಂಡ್‌ಗೆ ಒಲೈಸಲು ನೀಡಿದ್ದ ಭರವಸೆಯನ್ನು ಈಡೇರಿಸಲು ವ್ಯವಸ್ಥೆ ಮಾಡುವ ಮಾರ್ಗ ಬಿಡದಿ ಟೌನ್‌ಶಿಪ್ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಆರೋಪ ಮಾಡಿದರು.

ಡಿ.ಕೆ.ಶಿವಕುಮಾರ್ ಅವರ ಹೆಸರನ್ನು ಪ್ರಸ್ತಾಪಿಸದೆ ಆರೋಪ ಮಾಡಿದ ಅವರು, ಹೈಕಮಾಂಡ್‌ಗೆ ನೀಡಿದ ಭರವಸೆಯನ್ನು ಈಡೇರಿಸಲು ಬೇಕಾದಷ್ಟು ಮಾರ್ಗಗಳಿದ್ದು, ಅವುಗಳನ್ನು ಬಳಕೆ ಮಾಡಿಕೊಳ್ಳಿ, ಬಿಡದಿ ಟೌನ್‌ಶಿಪ್ ಅನ್ನು ಕೈಬಿಡಿ ಎಂದು ಆಗ್ರಹಿಸಿದರು.

ಜೂ.25 ರಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರಿಗೆ 11 ಪುಟಗಳ ಸುದೀರ್ಘ ಪತ್ರ ಬರೆದಿದ್ದು, ಅದರಲ್ಲಿ ಬಿಡದಿ ಟೌನ್‌ಶಿಪ್ ಅನ್ನು ಕೈಬಿಡಲು ಒತ್ತಾಯಿಸಿದ್ದೆ. ಒಂದು ವೇಳೆ ಯೋಜನೆಯನ್ನು ಕೈಬಿಡದೆ ಮುಂದುವರೆಸಿದ್ದೇ ಆದರೆ ವಿಧಾನಸೌಧದ ಆವರಣದಲ್ಲಿರುವ ಮಹಾತ ಗಾಂಧೀಜಿ ಪ್ರತಿಮೆ ಮುಂದೆ ಕುಳಿತು ರೈತರ ಪರವಾಗಿ ಸತ್ಯಾಗ್ರಹ ಮಾಡುತ್ತೇನೆ ಎಂದು ಹೇಳಿದ್ದೆ. ಆದರೆ ಅಂತಹ ಪರಿಸ್ಥಿತಿಗೆ ನನ್ನನ್ನು ದೂಡಬೇಡಿ ಎಂದರು.

ಟೌನ್‌ಶಿಪ್ ವಿರೋಧಿಸಿ ರೈತರು ಮಾಡುತ್ತಿರುವ ಹೋರಾಟಕ್ಕೆ ಈಗಾಗಲೇ ಜೆಡಿ–ಎಸ್ ಬೆಂಬಲ ನೀಡಿದೆ. ಜೊತೆಗೆ ಬಿಜೆಪಿಯೂ ಬೆಂಬಲ ನೀಡಲಿದೆ. ರೈತರ ಪರ ಹೋರಾಟವನ್ನು ಮುಂದುವರೆಸಲಾಗುವುದು ಎಂದರು.ಸುದೀರ್ಘ ವಿವರವನ್ನು ಒಳಗೊಂಡ ಪತ್ರ ಬರೆದು 20 ದಿನ ಕಳೆದರೂ ಮುಖ್ಯಮಂತ್ರಿಯವರಿಂದ ಉತ್ತರ ಬರುವುದಿರಲಿ, ಪತ್ರ ತಲುಪಿದೆ ಎಂಬ ಹಿಂಬರಹವನ್ನೂ ನೀಡಿಲ್ಲ ಎಂದು ಆರೋಪಿಸಿದರು.

ಊರುಗಳನ್ನು ಬಿಟ್ಟಿರುವ ಜನರು ಬಿಡದಿ ಟೌನ್‌ಶಿಪ್‌ಗೆ ಜಮೀನು ನೀಡುವುದಾಗಿ ಹೇಳುತ್ತಿದ್ದಾರೆ. ಆದರೆ ಸಣ್ಣಸಣ್ಣ ರೈತರು ಹೈನುಗಾ–ರಿಕೆ, ಕೃಷಿ, ತೋಟಗಾರಿಕೆ ಅವಲಂಬಿಸಿದ್ದು, ಅವರು ವಿರೋಧ ಮಾಡುತ್ತಿದ್ದಾರೆ. ನಿನ್ನೆ ಸರ್ವೆ ಮಾಡಲು ಕಂದಾಯ ಅಧಿಕಾರಿಗಳು ಹೋದಾಗ ಬೆಂಗಳೂರು ದಕ್ಷಿಣ ಜಿಲ್ಲಾ ಎಸ್ಪಿಯವರಿಗೆ ಭದ್ರತೆ ಒದಗಿಸುವಂತೆ ಕಂದಾಯ ಅಧಿಕಾರಿಗಳು ಮನವಿ ಮಾಡಿದ್ದಾರೆ. ಹಾಗಾಗಿ ಪೊಲೀಸರು ಹೋಗಿರುವುದಾಗಿ ಎಸ್ಪಿಯವರು ಹೇಳಿದ್ದಾರೆ. ಕಲ್ಲು ತೂರಾಟ ಮಾಡಿದ್ದರು ಎಂಬ ಆರೋಪದ ಮೇಲೆ ಎಫ್‌ಐಆರ್ ಹಾಕಿ ವಶಕ್ಕೆ ಪಡೆದಿದ್ದಾರೆ. ಕಲ್ಲು ಹೊಡೆಯಲು ಪ್ರಚೋದನೆ ಮಾಡಿದವರು ಯಾರು?, ಸರ್ಕಾರ ಯೋಜನೆ ಅನುಷ್ಠಾನಗೊಳಿಸಲು ಮುಂದಾದರೆ ಜಿಲ್ಲಾಧಿಕಾ–ರಿಗಳು ಅಸಹಾಯಕರಾಗುತ್ತಾರೆ ಎಂದು ಹೇಳಿದರು.

# ಕುಷ್ಠರೋಗ ದೇವರು ಶಾಪವಲ್ಲ ಶಾಪವಲ್ಲ ಎಂ.ಡಿ. ಟಿ ಚಿಕಿತ್ಸೆ ಸಂಪೂರ್ಣ ಗುಣಮುಖ



❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಸಮೀಪದ ಬಾಲಯ್ಯ ಕ್ಯಾಂಪ್ ನಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಕುಷ್ಟರೋಗ ವಿಭಾಗ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಕುಷ್ಟರೋಗ ಕುರಿತು ಜನಜಾಗೃತಿ ಮೂಡಿಸುವ ಕಾರ್ಯಕ್ರಮ ಬಾಲಯ್ಯ ಕ್ಯಾಂಪಿನ ಸಮುದಾಯದಲ್ಲಿ ಹಮ್ಮಿಕೊಳ್ಳಲಾಗಿತ್ತು

ಕಾರ್ಯಕ್ರಮದ ಕುರಿತು ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಕುಷ್ಟರೋಗ ಯಾವುದೇ ದೇವರ ಶಾಪವಲ್ಲ ಪಾಪವಲ್ಲ ಇದು ಚರ್ಮ ಮತ್ತು ನರಗಳಿಗೆ ಬರುವಂತಹ ಕಾಯಿಲೆ ಪ್ರಾರಂಭದ ಹಂತದಲ್ಲಿ ಪರೀಕ್ಷೆ ಮಾಡಿಸಿಕೊಂಡು ಚಿಕಿತ್ಸೆ ಪಡೆದುಕೊಳ್ಳುವುದು ಉತ್ತಮ ಕುಷ್ಟರೋಗದ ಲಕ್ಷಣಗಳಾದ ದೇಹದ ಮೇಲೆ ತಿಳಿ ಬಿಳಿ ತಾಮ್ರ ಬಣ್ಣದ ಸ್ಪರ್ಶಜ್ಞಾನ ಇಲ್ಲದ ಮಚ್ಚೆ ಕುಷ್ಟರೋಗ ಇರಬಹುದು ಬಿಸಿ ಮತ್ತು ತಣ್ಣನೆ ಅನುಭವ ಇಲ್ಲದೆ ಇರುವುದು ಕೈಕಾಲುಗಳಲ್ಲಿ ಜೋಮ ಬರುವುದು.

ಲಕ್ಷಣಗಳು ಕಂಡು ಬಂದರೆ ಕೂಡಲೇ ಹತ್ತಿರದ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿಕೊಳ್ಳಿ ಕುಷ್ಟರೋಗದ ಲಕ್ಷಣಗಳು, ಹರಡುವಿಕೆ, ಚಿಕಿತ್ಸೆ ಹಾಗೂ ತಡೆಗಟ್ಟುವ ಕ್ರಮಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು. ಕುಷ್ಟರೋಗವು ಸಂಪೂರ್ಣವಾಗಿ ಗುಣಪಡಿಸಬಹುದಾದ ರೋಗವಾಗಿದ್ದು, ಆರಂಭಿಕ ಹಂತದಲ್ಲಿಯೇ ಚಿಕಿತ್ಸೆ ಪಡೆದರೆ ಅಂಗವೈಕಲ್ಯವನ್ನು ತಪ್ಪಿಸಬಹುದು ಎಂದು ತಿಳಿಸಿದರು. ರೋಗಿಗಳ ಬಗ್ಗೆ ತಾರತಮ್ಯ ಅಥವಾ ಮೂಢನಂಬಿಕೆ ಹೊಂದದೆ, ಅವರಿಗೆ ಸಹಾನುಭೂತಿ ಮತ್ತು ಬೆಂಬಲ ನೀಡಬೇಕು ಕುಷ್ಟರೋಗಕ್ಕೆ ಎಲ್ಲಾ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಎಂ. ಡಿ .ಟಿ ಚಿಕಿತ್ಸೆಯನ್ನು ನೀಡಲಾಗುತ್ತದೆ ಎಂದು ಸಾರ್ವಜನಿಕರಿಗೆ ಕರೆ . ನೀಡಲಾಯಿತು

ನಂತರ ಮಾತನಾಡಿದ ಆಶಾ ಕಾರ್ಯಕರ್ತೆ ಈರಮ್ಮ ನಾವು ಮನೆ ಭೇಟಿ ನೀಡಿದಾಗ ಮನೆಯಲ್ಲಿ ಯಾರಿಗಾದರೂ ತಿಳಿ ಬಿಳಿ ತಾಮ್ರ ಬಣ್ಣದ ಸ್ಪರ್ಶಜ್ಞಾನ ಇಲ್ಲದ ಮಚ್ಚೆ ಇದ್ದರೆ ಯಾವುದೇ ಮುಜುಗರಕ್ಕೆ ಒಳಗಾಗದೆ ಪರೀಕ್ಷೆ ಮಾಡಿಸಿಕೊಂಡು ಕುಷ್ಟ ರೋಗ ನಿರ್ಮೂಲನೆಯಲ್ಲಿ ಸಹಕ–ರಿಸಬೇಕು ಯಾವುದೇ ಮೂಢನಂಬಿಕೆಗೆ ನಂಬಿಕೆಗೆ ಒಳಗಾಗಬಾರದು ಎಂದರು. ಈ ಸಂದರ್ಭದಲ್ಲಿ ತಾಯಂದಿರು ಮತ್ತು ಸಾರ್ವಜನಿಕರು ಮಕ್ಕಳು ವಿದ್ಯಾರ್ಥಿಗಳು ಹಾಜರಿದ್ದರು

## ರಾಮಚಂದ್ರಗೌಡರು ಪ್ರಾಮಾಣಿಕ ರಾಜಕಾರಣಿ : ಸಿಎಂ ಡಿಕೆಶಿ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಮಾಜಿ ಸಚಿವ ರಾಮಚಂದ್ರಗೌಡರು ನಿಷ್ಠೂರವಾಗಿ ನೀತಿ, ಸಿದ್ಧಾಂತದ ಮೇಲೆ ರಾಜಕಾರಣ ಮಾಡುತ್ತಿದ್ದ ನಿಷ್ಠ ಹಾಗೂ ಪ್ರಾಮಾಣಿಕ ರಾಜಕಾರಣಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗುಣಗಾನ ಮಾಡಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ಕೆಲಸ ಮಾಡಿದ್ದರು. ಪ್ರತಿಯೊಬ್ಬ ಸಣ್ಣ ನಾಗರೀಕನಿಗೂ ಗೌರವ ಕೊಟ್ಟು, ಅವರ ಜೊತೆ ಬೆರೆತು ಸಮಸ್ಯೆ ಅರಿತು ಸೇವೆ ಮಾಡುತ್ತಿದ್ದರು ಎಂದು ಸರಿಸಿಕೊಂಡರು. ಸಂಘ ಪರಿವಾರದ ಕಟ್ಟಾಳು, ಬಿಜೆಪಿ ಹಿರಿಯ ನಾಯಕ ರಾಮಚಂದ್ರಗೌಡ ವಿಧಿವಶ ಬೆಂಗಳೂರಿನ ಎಲ್ಲಾ ಸಮಸ್ಯೆ ಗಳನ್ನು ತಿಳಿದುಕೊಂಡಿದ್ದರು. ವಿಧಾನ ಪರಿಷತ್ ನಲ್ಲಿ ತಮ ಬುದ್ಧಿವಂತಿಕೆಯಿಂದ ಜನಪರ ಚರ್ಚೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅಪಾರ ಬಳಗ ಕಟ್ಟಿಕೊಂಡಿದ್ದರು. 1985ರಲ್ಲಿ ಸದಾನಗೌಡ ಚುನಾವಣೆಗೆ ನಿಂತಾಗ ವೈಯಕ್ತಿಕವಾಗಿ ಹೋಗಿ ಪ್ರಚಾರ ಮಾಡಿದ್ದರು ಎಂದು ಹೇಳಿದರು. ಬೆಂಗಳೂರಿನಲ್ಲಿ ದೊಡ್ಡ ಕುಟುಂಬವಾಗಿದ್ದರೂ ಅತ್ಯಂತ ಸರಳವಾಗಿದ್ದರು. ಬಿಜೆಪಿ ಮತ್ತು ಯಡಿಯೂರಪ್ಪನವರು ಯಾವುದೇ ತೀರ್ಮಾನ ತೆಗೆದುಕೊಳ್ಳಬೇಕಾದರೂ ರಾಮಚಂದ್ರಗೌಡರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದ್ದನ್ನು ನಾನು ಗಮನಿಸಿದ್ದೇನೆ ಎಂದರು. ರಾಮಚಂದ್ರಗೌಡರು ತಮಗೆ ಹತ್ತಿರದ ಸಂಬಂಧಿಕರು. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮಕ್ಕೆ ವ್ಹೀಲ್ ಚೇರ್ ನಲ್ಲಾದರೂ ಕರೆದುಕೊಂಡು ಹೋಗಿ ಎಂದು ಸಂಬಂಧಿಕರ ಬಳಿ ಹೇಳಿದ್ದರು ಎಂದು ಕೇಳಿದ್ದೇನೆ. ಎರಡು ದಿನಗಳ ಹಿಂದೆ ಅವರನ್ನು ಭೇಟಿ ಮಾಡಬೇಕು. ಮಾತನಾಡಬೇಕು ಎಂಬ ಆಸೆ ನನ್ನದಾಗಿತ್ತು. ಅದರೆ ಅದು ಆಗಲಿಲ್ಲ. ಇಂದು ಸರ್ಕಾರದ ಗೌರವದೊಂದಿಗೆ ಅವರನ್ನು ಭೇಟಿ ಮಾಡುವ ಸಂದರ್ಭದಲ್ಲಿ ನಿಂತಿದ್ದೇನೆ ಎಂದು ವಿಷಾದಿಸಿದರು. ಯಾವುದೇ ಪಕ್ಷವಾದರೂ ನಿಷ್ಠೂರ, ನೀತಿ, ಸಿದ್ಧಾಂತದ ಮೇಲೆ ರಾಜಕಾರಣ ಮಾಡುತ್ತಿದ್ದ ಅವರು, ಯಾರನ್ನೂ ವೈಯಕ್ತಿಕವಾಗಿ ದ್ವೇಷಿಸುತ್ತಿರಲಿಲ್ಲ. ಸಮಾಜದ ಹಿತಕ್ಕೆ ಪೂರಕವಾದ ವಿಚಾರಗಳನ್ನು ನೇರವಾಗಿ ಹೇಳುತ್ತಿದ್ದರು. ವಿಧಾನ ಪರಿಷತ್ ನಲ್ಲಿ ಅವರ ಭಾಷಣ ಯುವ ಪೀಳಿಗೆಗೆ ಮಾದರಿ, ಸರಳ ಸಜ್ಜನಿಕೆಯ ರಾಜಕಾರಣಿ ಎಂದು ಗುಣಗಾನ ಮಾಡಿದರು.

# ದೇವದುರ್ಗ ಕ್ಷೇತ್ರದಲ್ಲಿ ಜೆಡಿಎಸ್ ಮುಖಂಡರ ಪಲಾಯನ, ಕಾಂಗ್ರೆಸ್‌ಗೆ ಹೊಸ ಚೈತನ್ಯ: ಅನ್ವರ ಗ್ರಾಮದ ಪ್ರಮುಖರು ಕಾಂಗ್ರೆಸ್ ಗೆ ಸಾಮೂಹಿಕ ಸೇರ್ಪಡೆ.

❏ ನೈಜ್ಯ ದೆಸೆ ನ್ಯೂಸ್

ಅರಕೇರಾ: ರಾಜ್ಯ ಸರ್ಕಾರದ ಜನಪರ ಆಡಳಿತವನ್ನು ಮೆಚ್ಚಿ ವಿವಿಧ ಪಕ್ಷಗಳ ಕಾರ್ಯಕರ್ತರು ಕಾಂಗ್ರೆಸ್ ಕಡೆ ಒಲವು ತೋರುತ್ತಿದ್ದಾರೆ ಎಂದು ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀದೇವಿ ಆರ್. ನಾಯಕ ಹೇಳಿದರು.

ಪಟ್ಟಣದ ನಿವಾಸದಲ್ಲಿ ಸೋಮವಾರ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ,"ಗ್ಯಾರಂಟಿ ಯೋಜನೆಗಳ ಮೂಲಕ ಕಾಂಗ್ರೆಸ್ ಸರ್ಕಾರ ಪ್ರತಿ ಕುಟುಂಬಕ್ಕೂ ನೆರವಾಗಿದೆ. ದೇವದುರ್ಗ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪಕ್ಷ ಬದ್ಧವಾಗಿದೆ. ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನು ಮೆಚ್ಚಿ ಬರುವ ಎಲ್ಲರನ್ನೂ



ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತೇವೆ. ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತಷ್ಟು ಬಲಿಷ್ಠವಾಗಲಿದೆ" ಎಂದರು.

ಮಾಜಿ ತಾಪಂ ಸದಸ್ಯರಾದ ಗಂಗಾಧರ್ ಅನ್ವರ, ಅಯ್ಯಪ್ಪ ಗುರಿಕಾರ, ಬಸವರಾಜ ಚಡಕಲಗುಡ್ಡ ಇವರುಗಳ ನೇತೃತ್ವದಲ್ಲಿ ಅನ್ವರ ಗ್ರಾಮದ 60 ಕ್ಕೂ ಹೆಚ್ಚು ಜೆಡಿಎಸ್ ಪಕ್ಷದ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.ಇವರನ್ನು ಪಕ್ಷದ ಶಾಲು ಹಾಕಿ ಧ್ವಜ ನೀಡಿ ಸ್ವಾಗತಿಸಿದರು. ಹನುಮಂತ್ರಾಯಗೌಡ ಗಚ್ಚಿನ ಮನೆ, ಅಯ್ಯಪ್ಪ ಗುರಿಕಾರ, ಬಾಲದಂಡಪ್ಪ, ನರಸಣ್ಣ, ದೊಡ್ಡ ನರಸಣ್ಣ, ಈರಣ್ಣ ಪೈದೊಡ್ಡಿ, ಆಂಜಿನಯ್ಯ ಬಡೇಗಾರ, ಹೊನ್ನಪ್ಪ ಕುರಿಯವರು, ನೀಲಕಂಠಪ್ಪ, ಮಾಜಿ ಗ್ರಾಪಂ.ಸದಸ್ಯರಾದ ಹನುಮಯ್ಯ ನಮ್ಮಸಲ್, ಹನುಮಯ್ಯ ಮಲ್ಲಾಪುರ, ಹನುಮಯ್ಯ ಪೂಜಾರಿ, ಸೇ–ರಿದಂತೆ ಹಲವರು ಸೇರ್ಪಡೆಯಾದರು.

ಈ ವೇಳೆ ಯುವ ಕಾಂಗ್ರೆಸ್ ಅಧ್ಯಕ್ಷ ಲಿಂಗಣ್ಣ ನಾಯಕ, ಕುಮಾರ್ ರಾಠೋಡ್, ರಾಮನಗೌಡ ದೊರೆ, ಅಭಿಷೇಕ್ ಪೂಜಾರಿ, ಮುದ್ದಣ್ಣ ನಾಯಕ, ಮೌನೇಶ್ ನಾಯಕ, ಬಸವರಾಜ್ ನಾಯಕ, ರಾಜು ಖಾನಾಪುರ, ಪೋಮಣ್ಣ ಸೇರಿದಂತೆ ಮುಖಂಡರು ಹಾಗೂ ಯುವ ಕಾರ್ಯಕರ್ತರು ಉಪಸ್ಥಿತರಿದ್ದರು.

# ಶೀಲಹಳ್ಳಿ ಸರಕಾರಿ ಶಾಲೆಯಲ್ಲಿ ಮಲೇರಿಯಾ ಕುರಿತು ಮುಂಜಾಗ್ರತೆ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ತಾಲೂಕಿನ ಕ್ರಷ್ಣಾ ನದಿ ತೀರದ ಶೀಲಹಳ್ಳಿ ಗ್ರಾಮದಲ್ಲಿ ಶಾಲಾ ಮಕ್ಕಳು ಹಾಗೂ ಶಿಕ್ಷಕರಿಗೆ ಮಲೇರಿಯಾ ಮತ್ತು ಇತರ ಸೊಳ್ಳೆವಾಹಕ ರೋಗಗಳ ಕುರಿತು ಆರೋಗ್ಯ ಶಿಕ್ಷಣ ಸಂವಹನ ಹಾಗೂ ಮಲೇ–ರಿಯಾ ಮುಂಜಾಗ್ರತೆ ಕಾರ್ಯಕ್ರಮ ಜರುಗಿತು.

ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ ಜೋಶಿ ಯವರು ಮಾಹಿತಿ ನೀಡಿ ಬೇಸಿಗೆ ಮತ್ತು ನದಿಯಲ್ಲಿ ನೀರಿನ ಹರಿವು ಇಲ್ಲವಾದಾಗ ನದಿ ಪಾತ್ರದಲ್ಲಿ ಲೆಕ್ಕವಿಲ್ಲ ದಷ್ಟು ಸಣ್ಣ ಸಣ್ಣ ಕಲ್ಲುಗಳ ಮಧ್ಯದಲ್ಲಿ ನೀರು ಸಂಗ್ರಹ ವಾಗುವುದರಿಂದ ಅನಾಫಿಲಿಸ್. ಇಡಿಸ್ ಇಜಿಪ್ಟೆ ಸೊಳ್ಳೆಗಳು ಸಂಗ್ರಹಿತ ನೀರಿನಲ್ಲಿ ಮೊಟ್ಟೆ ಇಡುತ್ತವೆ. ಲಾರ್ವಾ, ಪ್ಯೂಪಾ ಹಂತ ಮಾರ್ಪಾಟಾಗಿ ಸೊಳ್ಳೆಗಳು ಹೊರ ಹೊಮ್ಮುತ್ತವೆ. ಆದ್ದರಿಂದ ಶೀಲಹಳ್ಳಿ ಯಂತೆ, ಹಂಚಿ ನಾಳ. ಯರಗೋಡಿ. ಕಡದರಗಡ್ಡಿ. ಯಳಗುಂದಿ ಇತರೆ



ಗ್ರಾಮಗಳಲ್ಲಿ ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳ ಮಾರ್ಗ ಸೂಚಿಯನ್ವಯ ಪ್ರತಿ ವರ್ಷ ಮಾರ್ಚ್ ಮತ್ತು ಜುಲೈ ವೇಳೆಯಲ್ಲಿ ಲ್ಯಾಂಬಾ ಸೈಲೋಡ್ರಿನ್ 10% ಪರಿಣಾಮಕಾರಿ ಔಷಧ ಸಿಂಪರಣೆ ಕಾರ್ಯ ಜಾರಿಯಲ್ಲಿದೆ. ಸಾರ್ವಜನಿಕರು ಪ್ರತಿಯೊಂದು ಮನೆಯ ಕೋಣೆಗಳಿಗೂ ಕೀಟ ನಾಶಕ ಸಿಂಪರಣೆಗೆ ಕೈ ಜೋಡಿಸಬೇಕು.

ಪ್ರಸ್ತುತ ಆರೋಗ್ಯ ನಿರೀಕ್ಷಣಾಧಿಕಾರಿಗಳು. ಸಮುದಾಯ ಆರೋಗ್ಯಾಧಿಕಾರಿಗಳು, ಆಶಾಕಾರ್ಯ ಕರ್ತರು ರಾಪಿಡ್ ಡಯೋಗೋಸ್ಟಿಕ್ ಕಿಟ್ ಮೂಲಕ ಸ್ಥಳದಲ್ಲಿಯೇ ಪರೀಕ್ಷಿಸಿ ಮಲೇರಿಯಾ ದೃಢಪಟ್ಟಲ್ಲಿ ಅದೇ ದಿನದಂದು ತೀವ್ರ ತರ ಸಂಪೂರ್ಣಚಿಕಿತ್ಸೆ ನೀಡಿ ಸೋಂಕು ಹರಡುವಿಕೆ ತಡೆಗಟ್ಟಲಾಗುವುದು. ಅಲ್ಲದೇ ಎಲ್ಲ ಮನೆಗಳಲ್ಲಿ ನೀರಿನ ತಾಣಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಬೇಕು ಇದರಿಂದ ಲಾರ್ವ ನಾಶವಾಗುತ್ತವೆ.

ಮಲೇರಿಯಾ ಮತ್ತು ಡೆಂಗ್ಯೂ ಜ್ವರ ಲಕ್ಷಣಗಳನ್ನು ಹಾಗೂ ಮುಂಜಾಗ್ರತ ಕ್ರಮಗಳ ಕುರಿತು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಹೇಮಂತ ರಾಜ್ ತಿಳಿಸಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಸುವರ್ಣ. ಭಾಗೀರಥಿ.ರವಿ. ಅಮರೇಶ. ಆರೋಗ್ಯ ಅಲಂಪಾಶಾ.ಹುಸೇನಪ್ಪ, ಶಾಲಾ ಮಕ್ಕಳು ಹಾಜರಿದ್ದರು. ನಿರೀಕ್ಷಣಾಧಿಕಾರಿ

# ಕಾರುಣ್ಯಾಶ್ರಮದಲ್ಲಿ ಮಾಜಿ ಸಚಿವ ಶಿವನಗೌಡ ನಾಯಕ ಅವರ ಜನ್ಮದಿನ ಆಚರಣೆ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಕೆ. ಶಿವನಗೌಡ ನಾಯಕ ಅಭಿಮಾನಿ ಬಳಗ ಸಿಂಧನೂರು ಹಾಗೂ ಟಿ. ಸುಬ್ಬರಾವ್ ಮತ್ತು ಸಿದ್ದು ಹೂಗಾರ ಗೆಳೆಯರ ಬಳಗ ಸಿಂಧನೂರು ವತಿಯಿಂದ ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀ ಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಕಲ್ಯಾಣ ಕರ್ನಾಟಕದ ಯುವಕರ ಕಣ್ಮಣಿ ದೇವದುರ್ಗ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು ಹಾಗೂ ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ ಅವರ 49ನೇ ವರ್ಷದ ಜನ್ಮದಿನೋತ್ಸವ ಕಾರ್ಯಕ್ರಮವು ರಾಯಚೂರು ಬಿ.ಜೆ.ಪಿ. ಜಿಲ್ಲಾ ಕಾರ್ಯದರ್ಶಿಗಳಾದ ಟಿ. ಸುಬ್ಬಾರಾವ್ ಹಾಗೂ ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷರಾದ ಸಿದ್ದು ಹೂಗಾರ್ ಅವರ ನೇತೃತ್ವದಲ್ಲಿ ಅನ್ನದಾಸೋಹ



ಮತ್ತು ಹಣ್ಣು ಹಂಪಲುಗಳನ್ನು ವಿತರಣೆ ಮಾಡುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು.

ಈ ಕಾರ್ಯಕ್ರಮದಲ್ಲಿ ಅನ್ನಸಂಪರ್ಪಣೆ ಮಾಡಿ ವಿಶೇಷ ಪ್ರಾರ್ಥನೆಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಆಶ್ರಯದಾತರುಗಳಿಂದ ಶುಭಕೋರಿ ಆಶೀರ್ವದಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ನಮ್ಮ ಕಲ್ಯಾಣ ಕರ್ನಾಟಕ ಭಾಗದ ಯುವಕರ ಕಣ್ಮಣಿಯಾದ ಕೆ.ಶಿವನಗೌಡ ನಾಯಕ ಅವರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಅವರ ಹೋದ ವರ್ಷದ ಜನ್ಮದಿನ ಆಶ್ರಮದಲ್ಲಿ ಅವರ ನೇತೃತ್ವದಲ್ಲಿ ಆಚರಣೆ ಮಾಡಲಾಗಿತ್ತು. ಆದ–'ರೆ ಈ ವರ್ಷ ರೈತರ ಬರಗಾಲದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ನವಲಿ ಜಲಾಶಯದ ಕನಸನ್ನು ಹೊತ್ತಿರುವ ಕೆ.ಶಿವನಗೌಡ ನಾಯಕ ಅವರ ಜನ್ಮದಿನ ಸಂಕಲ್ಪ ಸಮಾವೇಶದೊಂದಿಗೆ ಕವಿತಾಳ ಪಟ್ಟಣದಲ್ಲಿ ನೆರವೇರುತ್ತಿರುವುದು. ಇಡೀ ರಾಜ್ಯಕ್ಕೆ ಗೊತ್ತಾಗಿರುವ ವಿಚಾರ.

ಶಿವನಗೌಡ ನಾಯಕ ಅವರು ಸರಳ ಸಜ್ಜನಿಕೆಯ ಸರಳ ಸಾಮಾನ್ಯ ವ್ಯಕ್ತಿತ್ವ ಹೊಂದಿರುವ ಒಬ್ಬ ಆದರ್ಶ ರಾಜಕಾರಣಿಯಾಗಿ ರಾಜ–ಕಾರಣದಲ್ಲಿ ತಮ್ಮದೇ ಆದಂತಹ ವರ್ಚಸ್ಸು ಇಟ್ಟುಕೊಂಡಿರುವಂತಹ ಧೀಮಂತ ನಾಯಕ ಅವರು ಹೋದ ವರ್ಷ ತಮ್ಮ ಜನ್ಮದಿನ ಸಮಾರಂಭ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮಕ್ಕೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಸ್ವಂತ ಜಾಗ ಹಾಗೂ ಅನುದಾನ ನೀಡುವುದಾಗಿ ಭರವಸೆ ನೀಡಿದ್ದಾರೆ. ಅದರಂತೆ 2028ನೇ ವಿಧಾನಸಭಾ ಚುನಾವಣೆಯಲ್ಲಿ ಅವರು ಮತ್ತೊಮ್ಮೆ ಶಾಸಕರಾಗಿ ಸಚಿವರಾಗಲಿ ಎನ್ನುವುದು ಕಾರುಣ್ಯ ಕುಟುಂಬದ ಶುಭಾಶೀರ್ವಾದ ಎಂದು ಮಾತನಾಡಿ ಶುಭ ಹಾರೈಸಿದರು.. ಈ ಕಾರ್ಯಕ್ರಮದಲ್ಲಿ ಸುಜಾತ ಹಿರೇಮಠ ಸದಸ್ಯರು ಕಾರುಣ್ಯ ಆಶ್ರಮ. ಹನುಮಂತಪ್ಪ ನಿವೃತ್ತ ಎ.ಎಸ್.ಐ. ಅಧಿಕಾರಿಗಳು. ಪಂಪನಗೌಡ ಭೀಮನಗೌಡ್ರು ಹರೇಟನೂರು ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ ಮರಿಯಪ್ಪ. ಜ್ಯೋತಿ. ಹಾಗೂ ಕೆ.ಶಿವನಗೌಡ ನಾಯಕ ಅಭಿಮಾನಿಗಳು ಉಪಸ್ಥಿತರಿದ್ದರು.

# ನೇಮಕಾತಿ ಪ್ರಕಟಣೆ

**KFWCCF ನೇಮಕಾತಿ 2026 ವಿವಿಧ ಸಾರ್ವಜನಿಕ ಸಂಪರ್ಕ ಅಧಿಕಾರಿ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜುಲೈ 7, 2026**

KFWCCF ನೇಮಕಾತಿ 2026: ವಿವಿಧ ಸಾರ್ವಜನಿಕ ಸಂಪರ್ಕ ಅಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಅರಣ್ಯ ವನ್ಯಜೀವಿ ಮತ್ತು ಹವಾಮಾನ ಬದಲಾವಣೆ ಪ್ರತಿಷ್ಠಾನವು ಜುಲೈ 2026 ರ KFWCCF ಅಧಿಕೃತ ಅಧಿಸೂಚನೆಯ ಮೂಲಕ ಸಾರ್ವಜನಿಕ ಸಂಪರ್ಕ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 18–ಜುಲೈ–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಅಧಿಕೃತ ವೆಬ್‌ಸೈಟ್: kfwccf.in

## ಸರಕಾರ ಪ್ರತಿ ವರ್ಷ ತಾಲೂಕಿನ ಶಿಕ್ಷಣ ಇಲಾಖೆಗೆ 18 ಕೋಟಿ ರೂ ಅನುದಾನ ನೀಡುತ್ತಿದೆ – ಮಾನಪ್ಪ ವಜ್ಜಲ್

❏ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರ: ಶಾಲಾ ಕೊಠಡಿಗಳು, ಶೌಚಾಲಯ, ಕಾಂಪೌಂಡ್ ಸೇರಿದಂತೆ ಶಿಕ್ಷಣ ಇಲಾಖೆಯ ಇನ್ನಿತರ ಮೂಲಸೌಕರ್ಯ ಗಳಿಗಾಗಿ ತಾಲೂಕಿನ ಶಿಕ್ಷಣ ಇಲಾಖೆಗೆ ಸರಕಾರ ಕೆಕೆಆರ್ ಡಿ ಬಿಯಿಂದ ಪ್ರತಿ ವರ್ಷ 18 ಕೋಟಿ ರೂಪಾಯಿ ನೀಡುತ್ತಿದೆ ಎಂದು ಶಾಸಕ ಮಾನಪ್ಪ ವಜ್ಜಲ್ ಹೇಳಿದರು.**



ಅವರಿಂದು ಕೆಕೆಆರ್ ಡಿ ಬಿ ಅನುದಾನದಲ್ಲಿ ಪಟ್ಟಣದ ಸರಕಾರಿ ಶಾಸಕರ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಮಾಧ್ಯಮ ಹಾಗೂ ಉರ್ದು ಶಾಲೆಯಲ್ಲಿ ನೂತನವಾಗಿ ನಿರ್ಮಿಸಲಾದ' ಎರಡು ಭೋಜನಾಲಯ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದ ಅವರು ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳ ಕುರಿತು ಕ್ಷೇತ್ರ ಶಿಕ್ಷಣಾಧಿ ಕಾ–ರಿಗಳು ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದ ಶಾಲೆಗಳ ಮೂಲಭೂತ ಸೌಕರ್ಯಗಳ ಹಾಗೂ ಅಲ್ಲಿಯ ಸಮಸ್ಯೆಗಳ ಕುರಿತು ತಮ್ಮ ಗಮನಕ್ಕೆ ತಂದರೆ ಖಂಡಿತವಾಗಿಯೂ ಅವರ ವರದಿಯಂತೆ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನ ಮಾಡುತ್ತೇನೆ.

ಸರಕಾರಿ ಶಾಸಕರ ಮಾದರಿಯ ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅತ್ಯಧಿಕವಾಗಿದ್ದು ಮಕ್ಕಳು ಕುಳಿತುಕೊಂಡು ಊಟ ಮಾಡಲು ಈ ಭೋಜನಾಲಯ ಚಿಕ್ಕದಾಗುತ್ತಿದ್ದು ಮುಂಬರುವ ದಿನಗಳಲ್ಲಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಸುಮಾರು 50 ಲಕ್ಷ ರೂಪಾಯಿಗಳ ಬೃಹತ್ತಾದ ಸ್ಥಳದಲ್ಲಿ ಭೋಜನಾಲಯವನ್ನು ನಿರ್ಮಾಣ ಮಾಡಲು ಪ್ರಯತ್ನ ಮಾಡುತ್ತೇನೆ. ಹಂತ ಹಂತವಾಗಿ ಶಾಲೆಯ ಸಮಸ್ಯೆಗಳ ಪರಿಹಾರಕ್ಕೆ ಹಾಗೂ ತಾಲೂಕಿನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಮತ್ತು ಅವಶ್ಯವಿರುವ ಕಾಮಗಾರಿಗಳ ಪಟ್ಟಿಮಾಡಿ ಕ್ಷೇತ್ರ ಶಿಕ್ಷಣಾಧಿಕಾ–ರಿಗಳು ತಮಗೆ ಸಲ್ಲಿಸಿದರೆ ಕ್ರಿಯಾ ಯೋಜನೆ ಮೂಲಕ ಸರಕಾರಕ್ಕೆ ವರದಿ ಸಲ್ಲಿಸಲಾಗುವುದು.

ಯಾವುದೇ ರೀತಿಯಿಂದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಕಾರಣ–ಕ್ಕಾಗಿ ಸರಕಾರ ಶಿಕ್ಷಣ ಇಲಾಖೆಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತ ವಿವಿಧ ಯೋಜನೆಗಳನ್ನು ಜಾರಿಗೆ ತರಲಾಗಿದ್ದು ಶಿಕ್ಷಕರೂ ಸಹ ಸರಕಾರಿ ಶಾಲೆಗಳ ಕೀರ್ತಿ ತರುವಲ್ಲಿ ಪ್ರಮಾಣಿಕವಾಗಿ ಪ್ರಯತ್ನಿಸ 'ಬೇಕಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿ ಕಾರಿ ಸುಜಾತಾ ಹೂರ್ನಾ, ಶಿಕ್ಷಣ ಸಂಯೋಜಕ ಹನುಮಂತಪ್ಪ ಕ್ವಾರಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಗುರು ಸಂಗಯ್ಯ ಗಣಾಚಾರಿ, ಶಾಸಕರ ಶಾಲೆಯ ಮುಖ್ಯ ಗುರು ಸುಭಾಷ್, ಮೌನೇಶ, ಉರ್ದು ಶಾಲೆಯ ಮುಖ್ಯ ಶಿಕ್ಷಕಿ ಆಶಾಬೇಗಂ, ಎಸ್ ಡಿಎಂಸಿ ಅಧ್ಯಕ್ಷರಮೇಶ್ ಸೇರಿದಂತೆ ಇತರರಿದ್ದರು.

## ಕಲ್ಯಾಣ ಕರ್ನಾಟಕ ಜನಪರ ವೇದಿಕೆ ಹೊಸ ಸಂಘಟನೆ ಅಧಿಕೃತವಾಗಿ ಚಾಲನೆ

❏ ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ದೀರ್ಘಕಾಲದ ಹೋರಾಟಗಾರ ಬಸವರಾಜ ಕೋರಳ್ಳಿ ಅವರು ಕಲ್ಯಾಣ ಕರ್ನಾಟಕ ಜನಪರ ವೇದಿಕೆ ಹೊಸ ಸಂಘಟನೆ ಸ್ಥಾಪಿಸಿ ಅಧಿಕೃತವಾಗಿ ಚಾಲನೆ ನೀಡಿದರು. ನಗರದ ಆರಾಧ್ಯ ದೈವ ಶರಣಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಸೇರಿದ ಅವರ ಬೆಂಬಲಿಗರು ಮತ್ತು ಆತ್ಮೀಯರು ಅಧಿಕೃತ ಪೋಸ್ಟರ್ ಬಿಡುಗಡೆಗೊಳಿಸಿ ಸಂಘಟನೆಗೆ ಚಾಲನೆ ನೀಡಿದರು.**



ಈ ಸಂದರ್ಭದಲ್ಲಿ ಮಾತನಾಡಿದ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೋರಳ್ಳಿ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಈ ಸಂಘಟನೆ ಸ್ಥಾಪಿಸಿದ್ದು ಮುಂದಿನ ದಿನಗಳಲ್ಲಿ ನಿರಂತರವಾಗಿ ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು ನಂತರ ಹೋರಾಟಗಾರ ಗಂಗಾಧರ್ ಕುಂಬಾರ್ ಮಾತನಾಡಿ ಬಸವರಾಜ ಕೊರಳಿ ಅವರ ಪ್ರಯತ್ನಕ್ಕೆ ಅಭಿನಂದಿಸುತ್ತೇನೆ ಮತ್ತು ಅವರಿಗೆ ಸದಾ ಬೆಂಬಲವಾಗಿ ನಿಲ್ಲುತ್ತೇವೆ ಎಂದರು. ನಂತರ ಹೋರಾಟಗಾರ ಶರಣು ಕುಲಕರ್ಣಿ ಮಾತನಾಡಿ ನಮ್ಮ ಭಾಗದ ಅಭಿವೃದ್ಧಿಗಾಗಿ ಈ ಸಂಘಟನೆ ಕೆಲಸ ಮಾಡಲಿ ಎಂದು ಆಶಿಸುತ್ತೇನೆ ಎಂದರು. ಈ ಸಂದರ್ಭದಲ್ಲಿ ಸಂಘಟನೆಯ ಮುಖಂಡರು ಮತ್ತು ಆತ್ಮೀಯರು ಹಾಗೂ ಬೆಂಬಲಿಗರು ಉಪಸ್ಥಿತರಿದ್ದರು.

## ಆರೋಪಿಗಳು ಕಂಡು ಬಂದರೆ ಕರೆ ಮಾಡಿ ಸಾರ್ವಜನಿಕರಲ್ಲಿ ಪೊಲೀಸ್ ಇಲಾಖೆ ಮನವಿ

❏ ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ಕೇಂದ್ರ ಕಾರಾಗೃಹದಿಂದ, ಪೋಕ್ಸೋ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ಆರೋಪಿ ಮಸ್ತಾನ್ ತಂದೆ ಮಾಣಿಕಪ್ಪ ಕಮಲಾಪುರ ವಯ: 31 ವರ್ಷ,**





ಸಾ॥ ಇಸ್ಲಾಮಾಪುರ್, ತಾ: ಬಸವಕಲ್ಯಾಣ, ಜಿ॥ಬೀದರ ಹಾಗೂ ಕೊಲೆ ಹಾಗೂ ಕೊಲೆಗೆ ಪ್ರಯತ್ನ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಆರೋಪಿತರಾದ ಸಂತೋಷ ತಂದೆ ಬಸಪ್ಪ ಮೇತ್ರಿ ವ॥ 28 ವರ್ಷ, ಸಾ॥ ಸಂತಪುರ ತಾ: ಔರಾದ, ಜಿ: ಬೀದರ್ ಮತ್ತು ಸಾಗರ ತಂದೆ ಭೀಮರಾವ ಹೊಸಮನಿ ವಯ: 30 ವರ್ಷ, ಸಾ॥ ಬಕಚೌಡಿ, ತಾ:ಜಿ: ಬೀದರ ಈ ಮೂರು ಜನ ಕೈದಿಗಳು ಕಲಬುರಗಿ ಯ ಕೇಂದ್ರ ಕಾರಾಗೃಹದಿಂದ ತಪ್ಪಿಸಿಕೊಂಡು ಓಡಿಹೋಗಿದ್ದು ಎಲ್ಲಾದರೂ ಕಂಡು ಬಂದಲ್ಲಿ ಕಲಬುರಗಿ ನಗರ ನಿಯಂತ್ರಣ ಕೋಣೆ ಮೊಬೈಲ್ ಸಂಖ್ಯೆ 9480805500 ಗೆ ಕರೆ ಮಾಡಿ ತಿಳಿಸಲು ಕೋರಲಾಗಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ನೇತಾಜಿ ಶಾಲೆಯಿಂದ ಜ್ಞಾನಜ್ಯೋತಿ ಶಾಲೆಯವರೆಗೆ ರಸ್ತೆ, ಚರಂಡಿ ನಿರ್ಮಿಸಲು ಆಗ್ರಹ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ವಾರ್ಡ್ ನಂ.2ರ ನೇತಾಜಿ ಶಾಲೆಯ ಹಿಂಭಾಗದಿಂದ ವಾರ್ಡ್ ನಂ.3ರ ಜ್ಞಾನಜ್ಯೋತಿ ಶಾಲೆಯವರೆಗೆ ಚರಂಡಿ ಹಾಗೂ ರಸ್ತೆ ನಿರ್ಮಿಸಿ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿ ಕನ್ನಡಸೇನೆ ಕರ್ನಾಟಕ ಸಂಘಟನೆಯ ಪದಾಧಿಕಾರಿಗಳು ಮಂಗಳವಾರ ಪಟ್ಟಣದ ಪುರಸಭೆ ಕಚೇರಿಯಲ್ಲಿ ವ್ಯವಸ್ಥಾಪಕ ನರಸಿಂಹಲು ಅವರಿಗೆ ಮನವಿ ಸಲ್ಲಿಸಿದರು.**



ಈ ವೇಳೆ ಮಾತನಾಡಿದ ಕನ್ನಡಸೇನೆ ಕರ್ನಾಟಕದ ತಾಲೂಕು ಅಧ್ಯಕ್ಷ ಬಸವರಾಜ ಮೈಲಾರಿ, ವಾರ್ಡ್ ನಂ.2ರ ನೇತಾಜಿ ಶಾಲೆಯ ಹಿಂಭಾಗದಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಕಲುಷಿತ ನೀರು ರಸ್ತೆ ಬದಿಯಲ್ಲಿ ನಿಂತು ಕೊಳಚೆ ವಾತಾವರಣ ನಿರ್ಮಾಣವಾಗಿದೆ. ಇದರಿಂದ ಸೊಳ್ಳೆಗಳ ಹಾವಳಿ ಹೆಚ್ಚಾಗಿ ಶಾಲಾ ಮಕ್ಕಳು ಹಾಗೂ ಸ್ಥಳೀಯ ನಿವಾಸಿಗಳು ಮಲೇ–ರಿಯಾ, ಕಾಲರಾ, ಅತಿಸಾರ, ವಾಂತಿ–ಭೇದಿ ಸೇ–ರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವ ಆತಂಕ ಎದುರಿಸುತ್ತಿದ್ದಾರೆ. ಆದ್ದರಿಂದ ಕೂಡಲೇ ಚರಂಡಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕನ್ನಡದ ಕಟ್ಟಾಳು ದೊಡ್ಡಪ್ಪ ಹೂಗಾರ ಮಾತನಾಡಿ, ವಾರ್ಡ್ ನಿವಾಸಿಗಳು ನಿಯಮಿತವಾಗಿ ಪುರಸಭೆಗೆ ಕಂದಾಯ ಪಾವತಿಸುತ್ತಿದ್ದರೂ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಜನಪ್ರತಿನಿಧಿಗಳು ಹಾಗೂ ಪುರಸಭೆ ಅಧಿಕಾರಿಗಳು ಈ ಭಾಗದ ಸಮಸ್ಯೆಗಳತ್ತ ನಿರ್ಲಕ್ಷ್ಯ ವಹಿಸಿರುವುದ–ರಿಂದ ವಾರ್ಡ್ ನಂ.2 ಮತ್ತು 3 ಕೊಳಚೆ ಪ್ರದೇಶವಾಗಿ ಮಾರ್ಪಟ್ಟಿವೆ. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ರಸ್ತೆ ಮತ್ತು ಚರಂಡಿ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರಧಾನ ಕಾರ್ಯದರ್ಶಿ ಶಿವಾನಂದ ನಾಯಕ ಮಾತನಾಡಿ, ಮಳೆಗಾಲದಲ್ಲಿ ಮಳೆ ನೀರು ಹಾಗೂ ಚರಂಡಿ ನೀರು ಹರಿದು ಹೋಗಲು ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಮನೆಗಳ ಮುಂಭಾಗ ಹಾಗೂ ಒಳಭಾಗಕ್ಕೂ ನೀರು ನುಗ್ಗಿ ನಿವಾಸಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ನೇತಾಜಿ ಶಾಲೆಯ ಹಿಂಭಾಗದಿಂದ ಜ್ಞಾನಜ್ಯೋತಿ ಶಾಲೆಯವರೆಗೆ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಯನ್ನು ತಕ್ಷಣ ಆರಂಭಿಸಬೇಕು. ಇಲ್ಲವಾದಲ್ಲಿ ಕನ್ನಡಸೇನೆ ಕರ್ನಾಟಕ ಸಂಘಟನೆಯ ವತಿಯಿಂದ ಪುರಸಭೆ ಕಚೇರಿ ಎದುರು ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಯುವ ಘಟಕದ ಜಿಲ್ಲಾ ಅಧ್ಯಕ್ಷ ವೀರೇಶ ವಿಶ್ವಕರ್ಮ, ನಗರ ಘಟಕದ ಅಧ್ಯಕ್ಷ ಶೇಖ್ ಮುಸ್ತಫಾ, ಸದಸ್ಯರಾದ ಸಿದ್ದಪ್ಪ, ಸಾಜೀದ್, ಸುದರ್ಶನ ಪೂಜಾರಿ, ಮಂಜುನಾಥ ಬಂಡಿ, ಶ್ರೀಶೈಲಾ ಮಂಜುನಾಥ, ಕೃಷ್ಣ ನಾಯಕ, ಭೀಮೇಶ ನಾಯಕ, ಹನುಮಂತ ನಾಯಕ, ನೂರ ಮಹ್ಮದ್, ಅಝುರುದ್ದೀನ್, ಸಂಜೀವ ನಾಯಕ, ಗೋಪಾಲ ನಾಯಕ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತ–ರಿದ್ದರು.

## ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವಂತೆ ಮನವಿ

❏ ನೈಜ್ಯ ದೆಸೆ ನ್ಯೂಸ್


**ದೇವದುರ್ಗ: ಇಂದು ದೇವದುರ್ಗ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಭೇಟಿ ನೀಡಿ, ತಾಲೂಕಿನ ವ್ಯಾಪ್ತಿಯಲ್ಲಿರುವ ಎಲ್ಲಾ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿನ ಸಮಸ್ಯೆಗಳ ಕುರಿತು ಅಧಿಕಾರಿಗಳೊಂದಿಗೆ ಸಮಗ್ರವಾಗಿ ಚರ್ಚಿಸಲಾಯಿತು.**




ವಿದ್ಯಾರ್ಥಿಗಳು ವಾಸಿಸುವ ಹಾಸ್ಟೆಲ್‌ಗಳಲ್ಲಿ ಶುದ್ಧ ಕುಡಿಯುವ ನೀರು, ಸ್ವಚ್ಛ ಶೌಚಾಲಯ, ಸಮರ್ಪಕ ವಿದ್ಯುತ್ ವ್ಯವಸ್ಥೆ, ಶುಚಿತ್ವ, ಉತ್ತಮ ಆಹಾರ, ಅಗತ್ಯ ಪೀಠೋಪಕರಣಗಳು ಸೇರಿದಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ತಕ್ಷಣವೇ ಕಲ್ಪಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಲಾಯಿತು.

ಅದರೊಂದಿಗೆ, ವಿದ್ಯಾರ್ಥಿಗಳ ವೈಯಕ್ತಿಕ ಸ್ವಚ್ಛತೆ ಮತ್ತು ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಸರ್ಕಾರದಿಂದ ನೀಡಬೇಕಾದ ಸೋಪ್ ಕಿಟ್‌ಗಳನ್ನು ಆದಷ್ಟು ಬೇಗ ವಿತರಣೆ ಮಾಡುವಂತೆ ಮನವಿ ಪತ್ರ ಸಲ್ಲಿಸಲಾಯಿತು. ಹಲವು ವಿದ್ಯಾರ್ಥಿ ನಿಲಯಗಳಲ್ಲಿ ಇನ್ನೂ ಸೋಪ್ ಕಿಟ್‌ಗಳು ವಿತರಣೆ ಆಗಿಲ್ಲ ಎಂಬುದನ್ನು ಅಧಿಕಾರಿಗಳ ಗಮನಕ್ಕೆ ತರಲಾಯಿತು.

ಗ್ರಾಮೀಣ ಪ್ರದೇಶಗಳಿಂದ ಬರುವ ಬಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಸರ್ಕಾರದ ವಿದ್ಯಾರ್ಥಿ ನಿಲಯಗಳನ್ನು ಅವಲಂಬಿಸಿ ವಿದ್ಯಾಭ್ಯಾಸ ಮಾಡುತ್ತಿರುವ ಹಿನ್ನೆಲೆಯಲ್ಲಿ, ಅವರಿಗೆ ಯಾವುದೇ ತೊಂದರೆಯಾಗದಂತೆ ಅಗತ್ಯ ಸೌಲಭ್ಯಗಳನ್ನು ವಿಳಂಬವಿಲ್ಲದೆ ಒದಗಿಸುವಂತೆ ಒತ್ತಾಯಿಸಲಾಯಿತು.


ದಲಿತ ವಿದ್ಯಾರ್ಥಿ ಪರಿಷತ್ (ರಿ)
ತಾಲೂಕ ಘಟಕ, ದೇವದುರ್ಗ


ದಲಿತ ವಿದ್ಯಾರ್ಥಿ ಪರಿಷತ್ (ರಿ)
ತಾಲೂಕ ಘಟಕ, ದೇವದುರ್ಗ

ಮನವಿ ಸ್ವೀಕರಿಸಿದ ತಾಲೂಕು ಅಧಿಕಾರಿಗಳು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಸ್ಥಳ ಪರಿಶೀಲನೆ ನಡೆಸಿ ಆದ್ಯತೆಯ ಮೇರೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗುವ ವಾತಾವರಣ ನಿರ್ಮಿಸಲು ಇಲಾಖೆಯು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

## ಬೋದೂರು ತಾಂಡಾದಲ್ಲಿ ಸೀತ್ಲಾ ಮಾತೆಯ ಹಬ್ಬ ಆಚರಣೆ

❏ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ಕೆ. ಬೋದೂರು ತಾಂಡಾದಲ್ಲಿ ಸೀತ್ಲಾ ಮಾತೆಯ ಹಬ್ಬವನ್ನು ಮಣ್ಣೆತ್ತಿನ ಅಮಾವಾಸ್ಯೆ ಅಂಗವಾಗಿ ಸಂಪ್ರದಾಯಬದ್ಧವಾಗಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು.**



ಮಕ್ಕಳಿಗೆ ಕಾಣಿಸಿಕೊಳ್ಳುವ ಮೈಲಮ್ಮ, ದಡಾರ, ಕಣ್ಣುಬೇನೆ ಸೇರಿದಂತೆ ಸಾಂಕ್ರಾಮಿಕ ರೋಗಗಳು ದೂರವಾಗಲಿ, ಗ್ರಾಮದಲ್ಲಿ ಸುಖ–ಶಾಂತಿ ನೆಲೆಸಲಿ ಹಾಗೂ ಉತ್ತಮ ಮಳೆ ಸು–ರಿದು ಬೆಳೆ ಸಮೃದ್ಧಿಯಾಗಲಿ ಎಂಬ ಸಂಕಲ್ಪದೊಂದಿಗೆ ಪ್ರತಿವರ್ಷ ಸೀತ್ಲಾ ಹಬ್ಬವನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಆಲ್ ಇಂಡಿಯಾ ಬಂಜಾರ ಸೇವಾ ಸಂಘ, ಕೊಪ್ಪಳದ ಸಂಘಟನಾ ಕಾರ್ಯದರ್ಶಿ ಅಮರೇಶ ರಾಠೋಡ ಮಾತನಾಡಿ, ಉತ್ತಮ ಮಳೆ, ಸಮೃದ್ಧ ಬೆಳೆ ಹಾಗೂ ರೈತರ ಕಲ್ಯಾಣಕ್ಕಾಗಿ ಸೀತ್ಲಾ ಮಾತೆಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಗ್ರಾಮದ ಪ್ರತಿಯೊಬ್ಬ ಕುಟುಂಬವೂ ಹಣ್ಣು–ಕಾಯಿ ಹಾಗೂ ಪೂಜಾ ಸಾಮಗ್ರಿಗಳನ್ನು ಸಮರ್ಪಿಸಿ ದೇವಿಯ ಆಶೀರ್ವಾದ ಪಡೆಯುತ್ತಾರೆ. ಕುಷ್ಟಗಿ ತಾಲೂಕಿನ ಬಹುತೇಕ ತಾಂಡಗಳಲ್ಲಿ ಈ ಹಬ್ಬವನ್ನು ಸಂಪ್ರದಾಯದಂತೆ ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸದಸ್ಯರಾದ ಹನಮಂತ ಚವ್ಹಾಣ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಯಮನೂರ ರಾಠೋಡ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ನಾಗಪ್ಪ ರಾಠೋಡ,ಬಾಬು ಚವ್ಹಾಣ, ಶ್ರೀನಿವಾಸ ಚವ್ಹಾಣ, ಶಿವಪ್ಪ ನಾಯಕ, ಚಂದಪ್ಪ ಕಾರಬಾರಿ, ಹನಮಪ್ಪ ರಾಠೋಡ, ಲೋಕಪ್ಪ ಪೂಜಾರಿ ಸೇರಿದಂತೆ ಸಮಾಜದ ಮುಖಂಡರು, ಗ್ರಾಮಸ್ಥರು ಹಾಗೂ ಮಹಿಳೆಯರು ಭಾಗವಹಿಸಿದ್ದರು.

## ಮಳೆಗಾಗಿ ಜೆಡಿಎಸ್ ನಿಂದ ಅಂಬಾಮಠಕ್ಕೆ ಪಾದಯಾತ್ರೆ: ವೆಂಕಟರಾವ್ ನಾಡಗೌಡ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ರಾಜ್ಯದಲ್ಲಿ ಈ ಬಾರಿ ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟ ಹಿನ್ನೆಲೆಯಲ್ಲಿ ಮಳೆಗಾಗಿ ದೇವರ ಮೊರೆ ಹೋದ ಮಾಜಿ ಸಚಿವ ವೆಂಕಟ–ರಾವ್ ನಾಡಗೌಡ ಸಿಂಧನೂರು ನಗರದ ಕೋಟೆ ಈರಣ್ಣ ಕಲ್ಯಾಣ ಮಂಟಪದಿಂದ ಪಾದಯಾತ್ರೆ ಪ್ರಾರಂಭಿಸಿ ತಾಲೂಕಿನ ಸುಪ್ರಸಿದ್ಧ ಸಿದ್ದಿಪರ್ವತ ಬಗಳಾಮುಖಿ ಅಂಬಾಮಠದ ಅಂಬಾದೇವಿ ಸನ್ನಿಧಾನದವರೆಗೂ ಜೆಡಿಎಸ್ ಪಕ್ಷದ ನೇತೃತ್ವದಲ್ಲಿ ನಾಡಗೌಡರ ಮುಂದಾಳತ್ವದಲ್ಲಿ ಬೃಹತ್ ಪಾದಯಾತ್ರೆಯನ್ನು ಜು.14 ಮಂಗಳವಾರ ಬೆಳಿಗ್ಗೆ 9 ಗಂಟೆಯಿಂದ ಹಮ್ಮಿಕೊಳ್ಳಲಾಯಿತು.**



ನಗರದ ಕೋಟೆ ಈರಣ್ಣ ಕಲ್ಯಾಣ ಮಂಟಪದಲ್ಲಿ ತಾಲೂಕಿನ ಎಲ್ಲಾ ಧರ್ಮದ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಪೂಜೆ ಸಲ್ಲಿಸಿ ಮಾತನಾಡಿದ ಜೆಡಿಎಸ್ ತಾಲೂಕು ಅಧ್ಯಕ್ಷರಾದ ಬಸವರಾಜ ನಾಡಗೌಡ ಮಳೆಗಾಗಿ ನಮ್ಮ ಪ್ರಾರ್ಥನೆ ಮತ್ತು ಪಾದಯಾತ್ರೆ, ರೈತರ ಸುಭೀಕ್ಷಕ್ಕಾಗಿ ಮಳೆ ಬರಲು ದೇವರ ಮೊರೆ ಹೋಗಲು ನಿರ್ಧರಿಸಿದ್ದೇವೆ. ಈಗಾಗಲೇ ಕಳೆದ ಬಾರಿಯು ಕೂಡ ಮಳೆಗಾಗಿ ಪಾದಯಾತ್ರೆ ಮಾಡಿದ್ದುಂಟು ನಂತರ ಮಳೆಯ ಕೂಡ ಬಂದಿದ್ದು ಇದೆ. ಅದೇ ರೀತಿಯಲ್ಲಿ ಭಕ್ತಿಯಿಂದ ದೇವರ ಮೊರೆ ಹೋದರೆ ಮಳೆ ಬರುತ್ತದೆ, ರೈತರ ಮೊಗದಲ್ಲಿ ಮಂದಹಾಸ ಮೂಡಿಸುತ್ತದೆ ಎಂಬ ಭರವಸೆಯ ಮಾತುಗಳನ್ನಾಡಿದರು. ತದನಂತರ ಬೃಹತ್ ಮಟ್ಟದ ಪಾದಯಾತ್ರೆಗೆ ಹರಗುರು ಚರಮೂರ್ತಿಗಳು ಚಾಲನೆ ನೀಡಿ ನಾಡಗೌಡರಿಗೆ ಆರ್ಶೀವದಿಸಿದರು.

ಈ ವೇಳೆ: ಗೊರೇಬಾಳ ಕ್ಯಾಂಪ್ ಮರಳು ಸಿದ್ದರಾಮ ಶರಣರು, ತುರ್ವಿಹಾಳ ಅಮರಗುಂಡಯ್ಯಸ್ವಾಮಿ, ಮಾದಯ್ಯಸ್ವಾಮಿ ಗುರುವಿನ್, ವಿಶ್ವನಾಥಸ್ವಾಮಿ ಪಗಡದಿನ್ನಿ ಕ್ಯಾಂಪ್, ಚಿಕಲಪರ್ವಿ ಮಲ್ಲಯ್ಯತಾತ, ಗೋನವಾರ, ಜವಳಗೇರಾ, ಸಿಂಧನೂರು, ಚರ್ಚ್ ಪಾದರಗಳು, ಸಮಾರಂಭ ಸಾನ್ನಿಧ್ಯ ವಹಿಸಿದ್ದರು.

ಮಾಜಿ ಸಚಿವ ವೆಂಕಟ–ರಾವ ನಾಡಗೌಡ, ಮಾಜಿ ಶಾಸಕ ವೆಂಕಟಪ್ಪ ನಾಯಕ ಮಾನ್ವಿ, ಮುಖಂಡರಾದ ಬಸವರಾಜ ನಾಡಗೌಡ, ಅಶೋಕಗೌಡ ಗದ್ರಟಗಿ, ಜಿ.ಸತ್ಯನಾರಾಯಣ, ಜೀಲಾನಿ ಪಾಷಾ, ಚಂದ್ರಶೇಖರ ಮೈಲಾರ, ಎಸ್.ಪಿ ಟೇಲರ್, ಧರ್ಮನಗೌಡ ಮಲ್ಕಾಪುರ, ನಾಗೇಶ ಹಂಚಿನಾಳ ಕ್ಯಾಂಪ್, ವೆಂಕಟೇಶ ನಂಜಲದಿನ್ನಿ, ವೀರೇಶ ಪನ್ನೂರು, ಅಯ್ಯನಗೌಡ ಆಯನೂರು, ಅಲ್ಲಮಪ್ರಭು ಪೂಜಾರಿ, ಆಂಜನೇಯ. ರಾಗಲಪರ್ವಿ, ಮಹಾವೀರ ಜೈನ್, ಸೈಯದ್ ಆಶೀಫ್, ಮೊಸೀನ್ ಸೇರಿದಂತೆ, ನೂರಾರು ಕಾರ್ಯಕರ್ತರು, ಹಿತೈಷಿಗಳು, ಅಭಿಮಾನಿಗಳು, ರೈತರು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ


### ಕೃತಕ ಬುದ್ಧಿಮತ್ತೆ ( AI)

ಕೃತಕ ಬುದ್ಧಿಮತ್ತೆ (Artificial Intelligence - AI) ಕೋರ್ಸ್‌ಗಳು ಯಂತ್ರ ಕಲಿಕೆ (Machine Learning), ಡೀಪ್ ಲರ್ನಿಂಗ್ ಮತ್ತು ಪೈಥಾನ್ (Python) ಪ್ರೋಗ್ರಾಮಿಂಗ್‌ನಂತಹ ಪರಿಕಲ್ಪನೆಗಳನ್ನು ಒಳಗೊಂಡಿರುತ್ತವೆ. ಇವುಗಳನ್ನು ಕನ್ನಡದಲ್ಲಿ ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳು ಮತ್ತು ಸ್ಥಳೀಯ ಸಂಸ್ಥೆಗಳ ಮೂಲಕ ಕಲಿಯಬಹುದು. ಈ ಕೋರ್ಸ್‌ಗಳು ನಿಮ್ಮನ್ನು ಭವಿಷ್ಯದ ಟೆಕ್ ಉದ್ಯೋಗಗಳಿಗೆ ಸಿದ್ಧಗೊಳಿಸುತ್ತವೆ.
ಕನ್ನಡದಲ್ಲಿ ಲಭ್ಯವಿರುವ ಕೋರ್ಸ್‌ಗಳುಕನ್ನಡದಲ್ಲಿ ಕಲಿಯಲು ಬಯಸುವವರಿಗೆ ಮೂಲಭೂತ ಮತ್ತು ಸುಧಾರಿತ ಹಂತದ ಕೋರ್ಸ್‌ಗಳು ಆನ್‌ಲೈನ್‌ನಲ್ಲಿ ಲಭ್ಯವಿವೆ.ಮೈಕ್ರೋಡಿಗ್ರಿ (Micro-Degree): ಇದು ಪೈಥಾನ್ ಮತ್ತು ಜುಪಿಟರ್ ನೋಟ್‌ಬುಕ್ ಬಳಸಿ 15+ ಗಂಟೆಗಳ ಕಾಲ ಮೂಲಭೂತ ಂಖ ಮತ್ತು ಮೆಷಿನ್ ಲರ್ನಿಂಗ್ ಅನ್ನು ಕಲಿಸುತ್ತದೆ.ಕನ್ನಡ ಕೋರ್ಸಸ್ (KannadaCourses): ಇಲ್ಲಿ ಆರಂಭಿಕರಿಗಾಗಿ ಕನ್ನಡದಲ್ಲೇ ವಿಶೇಷ ವಿನ್ಯಾಸದ ಮಾಡ್ಯೂಲ್‌ಗಳಿವೆ.ವಿಸ್ತಾರ ಜಿಂದಗಿ (Vistar Zindagi): 'AI For Beginners' ಕೋರ್ಸ್ ಮೂಲಕ ಇಂಗ್ಲಿಷ್ ಭೀತಿಯಿಲ್ಲದೆ ಹೊಸ ತಂತ್ರಜ್ಞಾನವನ್ನು ಕಲಿಯಬಹುದು.
ಕೋರ್ಸ್‌ನಲ್ಲಿ ಕಲಿಯುವ ಪ್ರಮುಖ ವಿಷಯಗಳುಈ ಕೋರ್ಸ್‌ಗಳಲ್ಲಿ ಸಾಮಾನ್ಯವಾಗಿ ಕೆಳಗಿನ ವಿಷಯಗಳನ್ನು ಪ್ರಾಯೋಗಿಕವಾಗಿ ಕಲಿಸಲಾಗುತ್ತದೆ:
ಪೈಥಾನ್ ಪ್ರೋಗ್ರಾಮಿಂಗ್ (Python Programming): ಂಖ ನ ಮೂಲ ಭಾಷೆಯ ಬಗ್ಗೆ ಸಂಪೂರ್ಣ ತರಬೇತಿ.
ಮೆಷಿನ್ ಲರ್ನಿಂಗ್ (Machine Learning): ಕಂಪ್ಯೂಟರ್‌ಗಳು ತಾವಾಗಿಯೇ ಕಲಿಯುವಂತೆ ಮಾಡುವುದು.
ಡೀಪ್ ಲರ್ನಿಂಗ್ ಮತ್ತು ನ್ಯೂರಲ್ ನೆಟ್‌ವರ್ಕ್‌ಗಳು (Deep Learning): ಮಾನವನ ಮಿದುಳಿನಂತೆ ಯೋಚಿಸುವ ವ್ಯವಸ್ಥೆಗಳನ್ನು ನಿರ್ಮಿಸುವುದು.NLP (Natural Language Processing): ಅಲೆಕ್ಸಾ ಅಥವಾ ಚಾಟ್‌ಜಿಪಿಟಿಯಂತಹ ಭಾಷಾ ಆಧಾರಿತ ತಂತ್ರಜ್ಞಾನಗಳು.ವಿದ್ಯಾರ್ಹತೆ ಮತ್ತು ಉದ್ಯೋಗಾವಕಾಶಗಳುಅರ್ಹತೆ: ಯಾವುದೇ ಪದವಿ, ಪಿಯುಸಿ ಅಥವಾ ಕಂಪ್ಯೂಟರ್ ಸೈನ್ಸ್ ಹಿನ್ನೆಲೆ ಇರುವವರು ಈ ಕೋರ್ಸ್‌ಗಳನ್ನು ಕಲಿಯಬಹುದು.ಉದ್ಯೋಗಗಳು: AI ಇಂಜಿನಿಯರ್, ಡೇಟಾ ಸೈಂಟಿಸ್ಟ್, ಮೆಷಿನ್ ಲರ್ನಿಂಗ್ ಸ್ಪೆಷಲಿಸ್ಟ್ ಮುಂತಾದ ಹುದ್ದೆಗಳು ಲಭ್ಯವಿವೆ.

## ವಿಶ್ವ ಜನಸಂಖ್ಯಾ ದಿನ ಆಚರಣೆ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ ವಿಜಯಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಜಯಪುರ ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿ ತಾಲೂಕಾ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಮುದ್ದೇಬಿಹಾಳ ಹಾಗೂ ತಾಳಿಕೋಟಿ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ ಹಾಗೂ ರಾಷ್ಟ್ರೀಯ ಡೇಂಗೀ ಮಾಸಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



ಜನಸಂಖ್ಯಾ ದಿನಾಚರಣೆ ಉದ್ದೇಶ ಹಾಗೂ ಘೋಷವಾಕ್ಯ ಆರೋಗ್ಯಕರ ಸಮಯದಲ್ಲಿ ಗರ್ಭಧಾರಣೆ ಹಾಗೂ ಮಕ್ಕಳ ನಡುವಿನ ಆರೋಗ್ಯಕರ ಅಂತರ ಕಾಪಾಡುವುದರ ತಾಯಿ ಮತ್ತು ಮಕ್ಕಳ ಆರೋಗ್ಯ ವ್ರದ್ದಿಸುವದೊಂದಿಗೆ ಅನಗತ್ಯ ಗರ್ಭದಾರಣೆ ತಡೆಗಟ್ಟಬಹುದು ಎಂಬುದರ ಕುರಿತು ಶ್ರೀಮತಿ ಅನಸುಯಾ ತೇರದಾಳ ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿಗಳು ಮಾತನಾಡಿದರು ಪ್ರತಿ ವರ್ಷ ಜುಲೈ 11 ರಂದು ವಿಶ್ವ ಜನಸಂಖ್ಯೆ ದಿನಾಚರಣೆ ಯನ್ನು ಆಚರಿಸಲಾಗುವುದು ಎಂದು ತಿಳಿಸಿದರು. ಜನಸಂಖ್ಯೆ ಬೆಳವಣಿಗೆಯಿಂದ ಆಗುವ ದುಷ್ಪರಿಣಾಮ ಹಾಗೂ ಜನಸಂಖ್ಯೆ ದಿನಾಚರಣೆ ಉದ್ದೇಶಗಳ ಕುರಿತು ತಿಳಿಸಿದರು.

ಕುಟುಂಬ ಕಲ್ಯಾಣ ಯೋಜನೆಯ ಶಾಶ್ವತ ಮತ್ತು ತಾತ್ಕಾಲಿಕ ವಿಧಾನಗಳ ಬಳಕೆ ಬಗ್ಗೆ ತಿಳಿಸಿದರು. ಜನನಗಳ ನಡುವೆ ಅಂತರ ಬಾಲ್ಯ ವಿವಾಹ ಮದುವೆಯ ವಯಸ್ಸು ಹೆಣ್ಣಿಗೆ 18 ವರ್ಷ, ಗಂಡಿಗೆ 21 ವರ್ಷ ಆಗಿರಬೇಕೆಂದು ತಿಳಿಸಿದರು. ನಂತರ ಬಿ.ಎಸ್.ಶಿವಯೋಗಿಮಠ ಹಿರಿಯ ಆರೋಗ್ಯ ನೀರಿಕ್ಷಣಾಧಿಕಾರಿಗಳು ಡೆಂಗೀ ನಿಯಂತ್ರಣ ನಮ್ಮೆಲ್ಲರ ಹೊಣೆ ಡೆಂಗೀ ಹರಡುವ ಬಗ್ಗೆ ಮುನ್ನೆಚ್ಚರಿಕೆಯ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಕಾಂಚನಾ ಪಾಟೀಲ,ನೂರಜಾನ ಬೋರಗಿ, ಬಿಸ್ಮಿಲ್ಲಾ ಬಿದಕೋಟಿ ಮಹಾದೇವಿ ಟಕ್ಕಳಕಿ ಹಾಗೂ ಆಶಾ ಕಾರ್ಯಕರ್ತೆಯರು ಇದ್ದರು. ಶ್ರೀಮತಿ ಅನ್ನಪೂರ್ಣ ನಡುವಿನಮನಿ ಃಊಇಔ ಸ್ವಾಗತಿಸಿ ವಂದಿಸಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.

# ವನ ಮಹೋತ್ಸವ ಮತ್ತು ಪರಿಸರ ಮಿತ್ರ ಪ್ರಶಸ್ತಿ ಪ್ರದಾನ



❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಪರಮಾನಂದ ಬೆಟ್ಟದಲ್ಲಿ ಪರಿಸರ ಸ್ನೇಹಿತರ ಬಯಕೆಯಂತೆ ಡೀಮ್ಡ್ ಅರಣ್ಯ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಅದನ್ನು ದೇವಿ ವನವಾಗಿಸಲು ಇಟ್ಟಿರುವ ಬೇಡಿಕೆಯನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಮುದ್ದೇಬಿಹಾಳ ಸಾಮಾಜಿಕ ಅರಣ್ಯ ವಲಯಾಧಿಕಾರಿ ಬಸವರಾಜ ಬಿರಾದಾರ ನರಸಲಗಿ ತಿಳಿಸಿದರು.

ಅವರು ತಾಲ್ಲೂಕಿನ ಬ.ಸಾಲವಾಡಗಿ ಗ್ರಾಮದ ಪರಮಾನಂದ ಬೆಟ್ಟದಲ್ಲಿ ಅರಣ್ಯ ಇಲಾಖೆ, 'ನಮ್ಮ ಹೆಮ್ಮೆ, ನಮ್ಮ ಸಾಲವಾಡಗಿ', ಹಸಿರು ಸಂಪದ ಬಳಗ ತಾಳಿಕೋಟೆ ಹಾಗೂ ಸ್ಥಳೀಯ ಗ್ರಾಮ ಪಂಚಾಯತಿ ಸಹಯೋಗದಲ್ಲಿ ಆಯೋಜಿಸಿದ್ದ ಏಳನೆಯ ವರ್ಷದ ವನಮಹೋತ್ಸವ–2026 ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು.

ಜನರ ಸಹಭಾಗಿತ್ವವಿಲ್ಲದೇ ಸರ್ಕಾರದ ಯಾವ ಯೋಜನೆಗಳೂ ಫಲಪ್ರದವಾಗುವುದಿಲ್ಲ, ಪರಿಸರ ರಕ್ಷಣೆಯಲ್ಲಿ ಸ್ಥಳೀಯ ಗ್ರಾಮಸ್ಥರು, ಪರಿಸರ ಪ್ರೇಮಿಗಳು ಪಾಲ್ಗೊಂಡು ಸಾಮಾಜಿಕ ಜವಾಬ್ದಾರಿ ನಿರ್ವಹಿಸುತ್ತಿರುವುದರಿಂದ ಹಸಿರೀಕರಣ ಹೆಚ್ಚಿದೆ ಎಂದರು.

ಸಾಹಿತಿ ಅಶೋಕ ಹಂಚಲಿ, ಸಾಹಿತಿ ಶ್ರೀಕಾಂತ ಪತ್ತಾರ, ವಿದ್ಯಾರ್ಥಿನಿ ಸಹನಾ ದೇಸಾಯಿ ಅನಿಲಕುಮಾರ ಇರಾಜ ಮಾತನಾಡಿದರು.

ರಾಮನಗೌಡ ಮುಂದಿನಮನಿ, ಸ್ವಾಗತಿಸಿದರು. ಅಂಬರೀಶ ಹಿರೇಮಠ, ಎಸ್.ಎಸ್.ಗಡೇದ ನಿರ್ವಹಿಸಿದರು. ಅಜೀತ ಯಾಳಗಿ ವಂದಿಸಿದರು.

ಕಾರ್ಯಕ್ರಮದಲ್ಲಿ ಅರಣ್ಯ ಇಲಾಖೆಯ ಆರ್.ಎಫ್.ಓ ಗಿರೀಶ ಹಲ್ಯುಡೆ, ಡಿ. ಆರ್.ಎಫ್.ಓ ರಮೇಶ, ವಿಜಯಪುರ ಡಯಟ್ ನ ಹಿರಿಯ ಉಪನ್ಯಾಸಕಿ ರೇಣುಕಾ ಕಲಬುರ್ಗಿ, ಗ್ರಾ.ಪಂ. ಪಿಡಿಓ, ಜಿ.ಪಂ.ನಿವೃತ್ತ ಅಧೀಕ್ಷಕ ಎನ್.ಡಿ.ಪಾಟೀಲ, ಹಸಿರು ಸಂಪದ ಬಳಗದ ಅಧ್ಯಕ್ಷ ಡಾ.ವಿ.ಎಸ್.ಕಾರ್ಚಿ, ನಮ್ಮ ಸಾಲವಾಡಗಿ ನಮ್ಮ ಹೆಮ್ಮೆ ಬಳಗದ ಅಧ್ಯಕ್ಷ ಶಿವರಾಮ ಪಾಟೀಲ, ಮುದ್ದೇಬಿಹಾಳ ಹಸಿರು ತೋರಣ ಗೆಳೆಯರ ಬಳಗದ ಅಧ್ಯಕ್ಷ ರವಿ ಗೂಳಿ, ಬಸವ ಹಸಿರು ಬಳಗದ ಸಂಸ್ಥಾಪಕ ಭೀಮನಗೌಡ ಗುಂಡಕನಾಳ, ನಿವೃತ್ತ ಎಸ್.ಪಿ.ರವಿ ಪಾಟೀಲ, ಮುದಕನಗೌಡ ಹೊರಗಿನಮನಿ, ಮುದಕನಗೌಡ ದೊಡಮನಿ, ಮಧುಗೌಡ ಪಾಟೀಲ, ಪ್ರಭುಗೌಡ ಗೌಡರೆಡ್ಡಿ, ಡಾ.ಸರೋಜಿನಿ ಕಾರ್ಚಿ, ಡಾ.ಆನಂದ ಭಟ್ಟ, ಡಾ.ಎ.ಎ.ನಾಲಬಂದ, ಡಾ.ಶ್ರೀಶೈಲ ಹುಕ್ಕೇರಿ, ಪ್ರಶಾಂತ ಜನಾದ್ರಿ, ಕಾಶಿನಾಥ ಸಜ್ಜನ ಸಿದ್ದು ಕರಡಿ, ಸತೀಶ ಕೇಮಶೆಟ್ಟಿ, ಅರಣ್ಯ ಇಲಾಖೆ ಸಿಬ್ಬಂದಿ ಗ್ರಾಮಸ್ಥರು, ಮುದ್ದೇಬಿಹಾಳ ಹಸಿರು ತೋರಣ ಗೆಳೆಯರ ಬಳಗ, ಬಸವ ಹಸಿರು ಬಳಗದವರು ಪಾಲ್ಗೊಂಡಿದ್ದರು. ವನಮಹೋತ್ಸವದಂಗವಾಗಿ ಬೆಟ್ಟದಲ್ಲಿ ಇನ್ನೂರಕ್ಕೂ ಅಧಿಕ ಸಸಿಗಳನ್ನು ನೆಡಲಾಯಿತು.

ಪರಿಸರ ಮಿತ್ರ ಪ್ರಶಸ್ತಿ ಪ್ರದಾನ: ಬ.ಸಾಲವಾಡಗಿಯ ನಿಂಗಣ್ಣ ಹಳ್ಳಿ. ನೆಡು ತೋಪು ಕಾವಲುಗಾರ ಅವರಿಗೆ ಹಾಗೂ ಸರ್ಕಾರಿ ಪ್ರೌಢಶಾಲೆ ಅಸ್ಕಿ, ಅವರಿಗೆ ಅವರುಗಳಿಗೆ ಹಸಿರು ಸಂಪದ ಬಳಗದ ವತಿಯಿಂದ 'ಪರಿಸರ ಮಿತ್ರ' ಪ್ರಶಸ್ತಿ ನೀಡಿ ಗೌರವಿಸಲಾಯಿತು. . ತಾಳಿಕೋಟೆ ತಾಲ್ಲೂಕಿನ ಬ.ಸಾಲವಾಡಗಿ ಗ್ರಾಮದ ಪರಮಾನಂದ ಬೆಟ್ಟದಲ್ಲಿ ವನಮಹೋತ್ಸವದಂಗವಾಗಿ ಸಸಿ ನೆಡುವ ಕಾರ್ಯಕ್ರಮ ಭಾನುವಾರ ನಡೆಯಿತು.

## ಯಾದಗಿರಿಯಲ್ಲಿ ಎಸ್.ಐ.ಆರ್ ಜಾಗೃತಿ ಹಾಗೂ ಸಂಘಟನಾತ್ಮಕ ಸಭೆ: ಮತದಾರರ ಪಟ್ಟಿ ಪರಿಷ್ಕರಣೆಗೆ ಒತ್ತು

❑ ನೈಜ್ಯ ದೆಸೆ ನ್ಯೂಸ್

ಯಾದಗಿರಿ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್.ಐ.ಆರ್) ಕುರಿತ ಜಾಗೃತಿ ಹಾಗೂ ಪಕ್ಷದ ಸಂಘಟನಾತ್ಮಕ ಕಾರ್ಯಚಟುವಟಿಕೆಗಳಿಗೆ ವೇಗ ನೀಡುವ ಉದ್ದೇಶದಿಂದ ಯಾದಗಿರಿ ಜಿಲ್ಲಾ ವ್ಯಾಪ್ತಿಯಲ್ಲಿ ಸಭೆ ನಡೆಯಿತು.

ಸಭೆಯಲ್ಲಿ ಭಾಗವಹಿಸಿದ್ದ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸಂಸದ ಗೋವಿಂದ ಕಾರಜೋಳ ಅವರು, ಪ್ರಜಾಪ್ರಭುತ್ವದ ಅಡಿಪಾಯವಾಗಿರುವ ಮತದಾರರ ಪಟ್ಟಿ ಪರಿಷ್ಕರಣೆಯ ಮಹತ್ವವನ್ನು ವಿವರಿಸಿದರು. ಅರ್ಹ ಯುವ ಮತದಾರರನ್ನು ಪಟ್ಟಿಗೆ ಸೇರ್ಪಡೆಗೊಳಿಸುವುದು ಹಾಗೂ ಪ್ರತಿಯೊಂದು ಬೂತ್ ಮಟ್ಟದಲ್ಲೂ ಜನಜಾಗೃತಿ ಮೂಡಿಸುವ ಕಾರ್ಯವನ್ನು ಪರಿಣಾಮಕಾರಿಯಾಗಿ ನಡೆಸುವ ಅಗತ್ಯವಿದೆ ಎಂದು ಹೇಳಿದರು.





ಸಭೆಯಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆ, ಬೂತ್ ಮಟ್ಟದ ಸಂಘಟನೆ ಬಲವರ್ಧನೆ ಹಾಗೂ ಪಕ್ಷದ ಮುಂದಿನ ಕಾರ್ಯಯೋಜನೆಗಳ ಕುರಿತು ವಿಸ್ತೃತ ಚರ್ಚೆ ನಡೆಯಿತು. ಪಕ್ಷದ ತತ್ವ–ಸಿದ್ಧಾಂತಗಳಿಗೆ ಬದ್ಧವಾಗಿರುವ ಕಾರ್ಯಕರ್ತರ ಪಡೆ ಸಂಘಟನೆಯ ಶಕ್ತಿಯಾಗಿದ್ದು, ಎಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಕರೆ ನೀಡಲಾಯಿತು.

ಈ ಸಂದರ್ಭದಲ್ಲಿ ಯಾದಗಿರಿ ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಮಾಜಿ ಸಚಿವ ರಾಜುಗೌಡ ಸುರುಪುರ, ಶಾಸಕರಾದ ಬಸವರಾಜ್ ಮತ್ತಿಮಡ್ ಹಾಗೂ ಸುಶೀಲ್ ನಮೋಶಿ, ಪಕ್ಷದ ಪ್ರಭಾರಿ ಅರುಣ್ ಶಹಾಪುರ್, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ ಸೇರಿದಂತೆ ಪಕ್ಷದ ಪ್ರಮುಖ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ರಾಜ್ಯ ರಾಜಕಾರಣದಲ್ಲಿ ಮಹತ್ವದ ಘಟನೆಗಳಿಗೆ ಸಾಕ್ಷಿಯಾಗಲಿದೆ ವಿಧಾನಮಂಡಲ ಅಧಿವೇಶನ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಮುಂದಿನ ತಿಂಗಳ ಆಗಸ್ಟ್ 6ರಿಂದ ಆರಂಭವಾಗಲಿರುವ ಕರ್ನಾಟಕ ವಿಧಾನಮಂಡಲದ ಮಳೆಗಾಲದ ಅಧಿವೇಶನವು ರಾಜ್ಯ ರಾಜಕಾರಣದಲ್ಲಿ ಅತ್ಯಂತ ಮಹತ್ವದ ಮತ್ತು ಕುತೂಹಲಕಾರಿ ತಿರುವಿಗೆ ಸಾಕ್ಷಿಯಾಗಲಿದೆ. ಏಕೆಂದರೆ ವಿಧಾನ ಪರಿಷತ್‌ನಲ್ಲಿ ಸ್ಪಷ್ಟ ಬಹುಮತ ಹೊಂದಿರುವ ಆಡಳಿತಾರೂಢ ಕಾಂಗ್ರೆಸ್ ಹಾಲಿ ಸಭಾಪತಿ ಬಸವರಾಜ್ ಹೊರಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಿದೆ.

ಒಂದು ವೇಳೆ ಸರ್ಕಾರ ಅಧಿವೇಶನ ಆರಂಭವಾಗುವ ಮುನ್ನವೇ ಸಭಾಪತಿಗಳ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರೆ ಅವರೇ ಸ್ವಯಂ ಪ್ರೇರಿತರಾಗಿ ತಮ ಸ್ಥಾನಕ್ಕೆ ರಾಜೀನಾಮೆ ನೀಡಬಹುದು. ಇಲ್ಲವೇ ಸದನದಲ್ಲಿ ಅವಿಶ್ವಾಸ ನಿರ್ಣಯವನ್ನು ಎದುರಿಸಬಹುದು. ಈ ಹಿಂದೆ ಸ್ವತಃ ಹೊರಟಿಯವರೇ ಹೇಳಿರುವಂತೆ ಸರ್ಕಾರ ನನ್ನ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರೆ ಒಂದು ಕ್ಷಣವೂ ಕೂಡ ನಾನು ಪೀಠದಲ್ಲಿ ಕೂರುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿದ್ದರು.ಹೀಗಾಗಿ, ಅವರ ನಡೆ ಕುತೂಹಲಕ್ಕೆ ಕಾರಣವಾಗಿದೆ.

ಅವಿಶ್ವಾಸನಿರ್ಣಯ: ಮೇಲನೆಯಲ್ಲಿ ಸಂಖ್ಯಾಬಲದ ಬದಲಾವಣೆಯು ನೇರವಾಗಿ ಹಾಲಿ ಸಭಾಪತಿಗಳ ಕುರ್ಚಿಗೆ ಕಂಟಕ ತಂದೊಡ್ಡಿದೆ. ಸದ್ಯ ಸಭಾಪತಿಯಾಗಿರುವ ಹಿರಿಯ ನಾಯಕ ಬಸವರಾಜ್ ಹೊರಟ್ಟಿ ಅವರು ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಬೆಂಬಲದೊಂದಿಗೆ ಆ ಸ್ಥಾನದಲ್ಲಿದ್ದಾರೆ. ಈಗ ಕಾಂಗ್ರೆಸ್ ಸ್ಪಷ್ಟ ಬಹುಮತ ಹೊಂದಿರುವುದರಿಂದ, ತಮದೇ ಪಕ್ಷದವರನ್ನು ಸಭಾಪತಿ ಮಾಡಲು ಹೊರಟ್ಟಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ತರುವುದು ಬಹುತೇಕ ನಿಶ್ಚಿತವಾಗಿದೆ.



ಇವರಲ್ಲಿ ಇದೇ ತಿಂಗಳ 21ರಿಂದ ಹಾಲಿ ಸದಸ್ಯರಾದ ಅಡಗೂರು ವಿಶ್ವನಾಥ್, ಭಾರತಿ ಶೆಟ್ಟಿ, ಶಾಂತಾರಾಮ್ ಬುಡ್ನ ಸಿದ್ದಿ, ಡಾ.ತಳವಾರ ಸಾಬಣ್ಣ ಹಾಗೂ ರಮೇಶ್ ಬಾಬು ಅವರ ಅಧಿಕಾರಾವಧಿ ಮುಕ್ತಾಯವಾಗಲಿದೆ. ತೆರವಾಗಲಿರುವ ಐದು ಸ್ಥಾನಗಳಿಗೆ ಕಾಂಗ್ರೆಸ್ ನಾಮ ನಿರ್ದೇಶನ ಮಾಡಲಿದ್ದು ಆಗ ಆ ಪಕ್ಷದ ಸಂಖ್ಯೆ 44ಕ್ಕೆ ಏರಿಕೆಯಾಗಿದೆ.

ಸಂಸದೀಯ ಇತಿಹಾಸದಲ್ಲೇ ಸುದೀರ್ಘ ಅನುಭವ ಹೊಂದಿರುವ ಹೊರಟ್ಟಿ ಅವರನ್ನು ಕೆಳಗಿಳಿಸುವುದು ಕಾಂಗ್ರೆಸ್‌ಗೆ ಸಂಖ್ಯಾಬಲದ ದೃಷ್ಟಿಯಿಂದ ಸುಲಭವಿದ್ದರೂ, ರಾಜಕೀಯವಾಗಿ ಇದು ತೀವ್ರ ಚರ್ಚೆಗೆ ಗ್ರಾಸವಾಗಲಿದೆ. ಒಟ್ಟು 75 ಸದಸ್ಯ ಬಲದ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಬಹುಮತಕ್ಕೆ 38 ಸದಸ್ಯರ ಬೆಂಬಲದ ಅಗತ್ಯವಿದೆ. ಮತ್ತೊಂದು ಕಡೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಡಿ.ಕೆ.ಶಿವಕುಮಾರ್ ಅವರಿಗೆ ಎದುರಾಗುತ್ತಿರುವ ಮೊದಲ ವಿಧಾನಮಂಡಲ ಅಧಿವೇಶನ ಇದಾಗಿದೆ. ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಆಕ್ರಮಣಕಾರಿ ದಾಳಿಯನ್ನು ಸದನದಲ್ಲಿ ಹೇಗೆ ಎದುರಿಸುತ್ತಾರೆ ಎಂಬುದು ಅವರ ನಾಯಕತ್ವದ ಶಕ್ತಿಗೆ ದಿಕ್ಸೂಚಿಯಾಗಲಿದೆ.

**ಹೊರಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯ ?**

**ಒಟ್ಟು ಸದಸ್ಯರು– 75**
**ಕಾಂಗ್ರೆಸ್– 39**
**ಬಿಜೆಪಿ– 28**
**ಜೆಡಿಎಸ್ –6**
**ಪಕ್ಷೇತರರು –1**
**ಸಭಾಪತಿ–1**

ಸಭಾಪತಿ ಮತ್ತು ಉಪಸಭಾಪತಿ ಸ್ಥಾನಗಳು ಕಾಂಗ್ರೆಸ್ ಮುಡಿಗೆ : ಮೇಲನೆಯಲ್ಲಿ ಗರಿಷ್ಠ ಸಂಖ್ಯಾಬಲ ಹೊಂದಿರುವುದರಿಂದ ಸಭಾಪತಿ ಮತ್ತು ಉಪಸಭಾಪತಿ ಎರಡೂ ಸಾಂವಿಧಾನಿಕ ಹುದ್ದೆಗಳನ್ನು ಕಾಂಗ್ರೆಸ್ ತನ್ನದಾಗಿಸಿಕೊಳ್ಳುವುದು ಸದ್ಯದ ರಾಜಕೀಯ ಲೆಕ್ಕಾಚಾರದಲ್ಲಿ ನಿಚ್ಚಳವಾಗಿದೆ.

ಪಕ್ಷದ ನಿಷ್ಠಾವಂತ ಹಿರಿಯ ನಾಯಕರೊಬ್ಬರಿಗೆ ಸಭಾಪತಿ ಸ್ಥಾನ ಹಾಗೂ ಮತ್ತೊಬ್ಬರಿಗೆ ಉಪಸಭಾಪತಿ ಸ್ಥಾನ ನೀಡುವ ಮೂಲಕ ಪಕ್ಷದ ಆಂತರಿಕ ವಲಯದಲ್ಲಿ ಸಮತೋಲನ ಕಾಯ್ದುಕೊಳ್ಳಲು ಹೈಕಮಾಂಡ್ ಮುಂದಾಗಬಹುದು.ಎರಡೂ ಸ್ಥಾನಗಳು ಆಡಳಿತ ಪಕ್ಷದ ವಶವಾದರೆ, ಸದನದ ಕಲಾಪಗಳನ್ನು ಸಂಪೂರ್ಣವಾಗಿ ಸರ್ಕಾರದ ಕಾರ್ಯಸೂಚಿಗೆ ತಕ್ಕಂತೆ ನಡೆಸಲು ಸುಲಭವಾಗುತ್ತದೆ.

# ರಾಜಕಾರಣಿಗಳಿಗೆ ಶಿವನಗೌಡ ನಾಯಕ್ ಮಾದರಿ –ವಿನಯ್ ಗುರುಜಿ

❑ ನೈಜ್ಯ ದೆಸೆ ನ್ಯೂಸ್

ಕವಿತಾಳ: ಇಂದಿನ ದಿನಗಳಲ್ಲಿ ಜನ್ಮದಿನವನ್ನು ನಾವು, ನಮ್ಮ ಕುಟುಂಬ, ಹಾಗೂ ಸ್ನೇಹಿತರೊಂದಿಗೆ ಮೋಜು ಮಸ್ತಿ ಮಾಡುವ ಮುಲಕ ಜನ್ಮದಿನವನ್ನು ಆಚರಿಕೊಳ್ಳುವವರ ಮದ್ಯೆ ನನ್ನ ಜಿಲ್ಲೆ, ನನ್ನ ಕಲ್ಯಾಣ ಕರ್ನಾಟಕದ ಜನತೆಗೆ ಬೇಕಾಗಿರುವಂತಹ ಮೂಲಭೂತ ಸೌಕರ್ಯಗಳಾದ ಸಮಗ್ರ ನೀರಾವರಿ,

ಏಮ್ಸ್ ಸ್ಥಾಪನೆ ಹಾಗೂ ಇನ್ನಿತರ ಜಲಾಶಯಗಳ ನಿರ್ಮಾಣದ ಕನಸ್ಸನ್ನು ಹೊತ್ತುಕೊಂಡು ಯಾವುದೇ ಆಡಂಬರವಿಲ್ಲದೆ ಸಮಗ್ರ ಅಭಿವೃದ್ಧಿಯ ಪಥ–'ದಲ್ಲಿ ಸಾಗುವ ಮನೋಬಿಲಾಸೆ?ಯಿಂದ ಅತ್ಯಂತ ಅರ್ಥಗರ್ಭಿತವಾಗಿ ಜನ್ಮ ದಿನವನ್ನು ಅಭಿಮಾನಿಗಳೋಂದಿಗೆ ಸೇರಿ ಆಚರಿಸಿಕೊಳ್ಳುತ್ತಿರುವ ಮಾಜಿ ಸಚಿವ ಶಿವನಗೌಡರ ನಡೆ ಇಡೀ ರಾಜ್ಯವನ್ನು ತಿರುಗಿ ನೊಡುವಂತೆ ಮಾಡಿದೆ ಆದ್ದರಿಂದ ಇಂತಹ ಕನಸ್ಸನ್ನು ಹೊತ್ತುಕೊಂಡಿರುವ



ಶಿವನಗೌಡರ ನಾಯಕರ ಕನಸು ನನಸು ಮಾಡುವಲ್ಲಿ ನಿಮ್ಮೆಲ್ಲರ ಪಾತ್ರ ಮುಖ್ಯವಾಗಿದೆ ಮತ್ತು ಶಿವನಗೌಡ ನಾಯಕ್ ಅವರು ಇನ್ನಿತರ ರಾಜಕಾರಣಿಗಳಿಗೆ ಮಾದರಿ ಎಂದರೇ ತಪ್ಪಗಲಾರದು ಎಂದು ವಿನಯ್ ಗುರುಜಿ ಅಭಿಪ್ರಾಯ ಪಟ್ಟರು.

ಅವರು ಇಂದು ಪಟ್ಟಣದಲ್ಲಿ ಕೆ.ಶಿವನಗೌಡ ನಾಯಕ್ ಜನ ಕಲ್ಯಾಣ ಸಮಿತಿ ಮತ್ತು ಅಭಿಮಾನಿ ಬಳಗದಿಂದ ಹಮ್ಮಿಕೊಂಡಿದ್ದ ಮಾಜಿ ಸಚಿವ ಶಿವನಗೌಡ ಅವರ 49ನೇ ವರ್ಷದ ಹುಟ್ಟು ಹಬ್ಬದ ಪ್ರಯುಕ್ತ ಹಮಹಮಿಕೊಂಡಿದ್ದ ಸಂಕಲ್ಪ ಸಮಾಗಮ ಕಾರ್ಯಕ್ರಮದ ಸಾನಿದ್ಯವನ್ನು ವಹಿಸಿ ಮಾತನಾಡಿದರು.

ನಂತರ ಮಾಜಿ ಶಾಸಕ ಶಿವನಗೌಡ ನಾಯಕ್ ಮಾತನಾಡಿ 'ಜುಲೈ14 ರಂದು ನನ್ನ ಜನ್ಮ ದಿನ ,ಈ ಬಾರಿ ನನಗೆ ಹಾರ ತುರಾಯಿಗಳು ಬೇಡ ನಮ್ಮ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಬೇಕಾಗಿರುವ ಸಮಗ್ರ ನೀರಾವಾರಿ ಯೋಜನೆ, ಏಮ್ಸ್ ಸ್ಥಾಪನೆಗೆ ದ್ವನಿ ಎತ್ತುತ್ತೆವೆ ಎಂಬ ಮಾತು, ಅದಕ್ಕಿಂತ ದೊಡ್ಡ ಉಡುಗೋರೆ ಇನ್ನೊಂದಿಲ್ಲ , ಪವಿತ್ರ ಮಣ್ಣಿನ ಮತ್ತು ನಿಮ್ಮೆಲ್ಲರ ಮುಂದೆ ನಾನು ಪ್ರತಿಜ್ಞೆ ಮಾಡುತ್ತಿದ್ದೆನೆ , ಸಮಗ್ರ ನೀರಾವರಿ, ಏಮ್ಸ್ ಸ್ಥಾಪನೆಯಾಗುವವರೆಗೆ ನನ್ನ ಹೋರಾಟ ನಿಲ್ಲುವುದಿಲ್ಲ ,ನಾನು ಹಿಂದೆ ಸರಿಯುವುದಿಲ್ಲ ,ಇದು ನನ್ನ ವಯಕ್ತಿಕ ಹೋರಾಟವಲ್ಲ ಕಲ್ಯಾಣ ಕರ್ನಾಟಕದ ಕೋಟ್ಯಾಂತರ ಜನತೆಯ ಕನಸಿನ ಹೋರಾಟವಾಗಿದ್ದು ಸುಮಾರು 1500 ದಿನಗಳಿಂದ ಏಮ್ಸ್ ಸ್ಥಾಪನೆಗಾಗಿ ಹೋರಾಟ ಮಾಡುತ್ತಾ ಇದ್ದಾರೆ ತಾವೆಲ್ಲರೂ ಕೈಜೊಡಿಸುವ ಮೂಲಕ ನಮ್ಮ ಹಕ್ಕನ್ನು ಪಡೆದುಕೊಳ್ಳ ಬೇಕಾಗಿದೆ'ಎಂದರು.

ವೇದಿಕೆ ಮೇಲೆ ಕವಿತಾಳ ಶ್ರೀ ಕಲ್ಮಠದ ಅಭಿನವ ಸಿದ್ದಲಿಂಗ ಮಹಾಸ್ವಾಮಿಗಳು, ಮುಂಡರಗಿಯ ಶಿವಣ್ಣ ತಾತನವರು, ಅಮೋಘಸಿದ್ದೇಶ್ವರ ಮಠದ ಮಾದಯ್ಯ ಗುರುವಿನ, ರವಿ ಹಿರೇಮಠ,ಸೇರಿದಂತೆ ಇನ್ನಿತರ ಮಠಾಧೀಶರು ಮತ್ತು ಶಿವನಗೌಡ ನಾಯಕ್ ಅವರ ಅಭಿಮಾನಿ ಬಳಗದ ಮುಖಂಡರು ಉಪಸ್ಥಿತರಿದ್ದರು. ಮಹಿಳೆಯರು ಕಳಸ, ಕುಂಭದೊಂದಿಗೆ ಆಗಮಿಸಿ ಶುಭಹಾರೈಸಿದ್ದು ವಿಶೇಷವಾಗಿತ್ತು ಮತ್ತು ದೇವದುರ್ಗ, ಯಾದಗಿರಿ, ಲಿಂಗಸುಗೂರು, ಸುರಪುರ, ರಾಯಚೂರು, ಮಾನ್ವಿ , ಸಿರವಾರ ತಾಲ್ಲೂಕಿಗಳಿಂದ ಗಮಿಸಿದ್ದ ಸಾವಿರಾರು ಸಂಖ್ಯೆಯ ಅಭಿಮಾನಿಗಳು ತಮ್ಮ ನಾಯಕನಿಗೆ ಶಿಳ್ಳೆ, ಚಪ್ಪಾಳೆ ತಟ್ಟುವ ಮೂಲಕ ಶುಭ ಹಾರೈಸಿದರು. ಬಾಳು ಬೆಳಗುಂದಿ ಮತ್ತು ಮಾಳು ನಿಪನಾಳ ಅವರ ಸುಮದುರ ಹಾಡುಗಳನ್ನು ಕೇಳಿ ಜನರು ಖುಷಿಪಟ್ಟರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101